12	ಜಿಲ್ಲಾ ಆಸ್ಪತ್ರೆಯಲ್ಲಿ ಆಯುಷ್ ಘಟಕ (ಯುನಾನಿ ವಿಭಾಗ)	2	0	0	2	**4**	1	0	0	0	**1**	1	0	0	2	**3**	1	0	0	0	**1**	0	0	0	0	**0**
	ಒಟ್ಟು	**15**	**1**	**16**	**22**	**54**	**11**	**0**	**6**	**4**	**21**	**4**	**1**	**10**	**18**	**33**	**6**	**0**	**1**	**2**	**9**	**5**	**0**	**5**	**2**	**12**

ವಾರ್ಷಿಕ ಕ್ರಿಯಾಯೋಜನೆ 2020–21

ನಮೂನೆ–1

ಇಲಾಖೆ: ಆಯುಷ್ (ರೂ.ಇನ್ನೂರ ಮೂವತ್ತೆರಡು ಲಕ್ಷದ ಅರವತ್ತೊಂಭತ್ತು ಸಾವಿರಗಳು ಮಾತ್ರ)

ಕ್ರ. ಸಂ	ಕಾರ್ಯಕ್ರಮ/ ಲೆಕ್ಕಶೀರ್ಷಿಕೆ	ಕಾರ್ಯಕ್ರಮದ ಬಗ್ಗೆ ಸಂಕ್ಷಿಪ್ತ ಮಾಹಿತಿ/ವಿವರ	ನಿಗದಿಪಡಿಸಿದ ಅನುದಾನ (ರೂ.ಲಕ್ಷಗಳಲ್ಲಿ)
1	2210–00–00–101–0–35 ಆಯುಷ್ ಜಿಲ್ಲಾ ಆಸ್ಪತ್ರೆಗಳು ಮತ್ತು ಹೋಮಿಯೋಪತಿ ಜಿಲ್ಲಾ ಖಾಸಗಿ ಆಸ್ಪತ್ರೆಗಳಿಗೆ ಸಹಾಯಾನುದಾನ	1. ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಹೋಮಿಯೋಪತಿ ಸಂಯುಕ್ತ ಆಸ್ಪತ್ರೆ ಇಲ್ಲಿನ ಅಧಿಕಾರಿ ಸಿಬ್ಬಂದಿಗಳಿಗೆ ವೇತನ ಭತ್ಯೆ ಪಾವತಿ ನಿರ್ವಹಣೆ	73.27
		1.ಜಿಲ್ಲಾ ಆಯುಷ್ ಇಲಾಖೆಯ ಅಧೀನದ ಸಂಸ್ಥೆಗಳ ಹೊರಗುತ್ತಿಗೆ ಆಧಾರದ ಗ್ರೂಪ್ ಡಿ ನೌಕರರ ವೇತನ ಪಾವತಿ ನಿರ್ವಹಣೆ 2.ಜಿಲ್ಲಾ ಆಯುಷ್ ಅಧಿಕಾರಿಗಳಿಗೆ ಹೊರಗುತ್ತಿಗೆಯ ಆಧಾರದಲ್ಲಿ ಪಡೆಯುವ ಚಾಲಕ ಸಮೇತ ವಾಹನ ಸೇವೆಯ ಬಿಲ್ಲುಗಳ ಪಾವತಿ 3.ಜಿಲ್ಲಾ ಆಯುಷ್ ಕಛೇರಿ ಮತ್ತು ಆಸ್ಪತ್ರೆಯ ಪ್ರಯಾಣಭತ್ಯೆ, ಕಛೇರಿ ವೆಚ್ಚ, ಆಯುಷ್ ಆಸ್ಪತ್ರೆ ಹಾಗೂ ಚಿಕಿತ್ಸಾಲಯಗಳಿಗೆ ಅಗತ್ಯವಾಗಿ ಬೇಕಾಗಿರುವ ಪೀಠೋಪಕರಣಗಳು, ಉಪಕರಣಗಳು, ಇತರೆ ಸಾಮಾಗ್ರಿಗಳ ಖರೀದಿ, ನಿರ್ವಹಣೆ ಹಾಗೂ ಇತರೆ ಅಭಿವೃದ್ಧಿಗಾಗಿ	9.60
		2020–21ನೇ ಸಾಲಿಗೆ ಜಿಲ್ಲಾ ಆಯುಷ್ ಇಲಾಖೆಯ ಅಧೀನದ ಸಂಸ್ಥೆಗಳ ಹೊರಗುತ್ತಿಗೆ ಆಧಾರದ ಗ್ರೂಪ್ ಡಿ ನೌಕರರ ವೇತನ ಪಾವತಿ ನಿರ್ವಹಣೆಗಾಗಿ ಉಪಲೆಕ್ಕಶೀರ್ಷಿಕೆ 034ರಡಿ ಅನುದಾನ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.	
		ಒಟ್ಟು	**82.87**
2	2210–00–101–0–36 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಟ್ಟಡಗಳು (ಆಯುಷ್ ಸೇರಿದೆ)	1.ಸರ್ಕಾರಿ ಯುನಾನಿ ಚಿಕಿತ್ಸಾಲಯ ಕಸ್ಬಾ ಬೆಂಗ್ರೆ, ಮಂಗಳೂರು ತಾಲೂಕು– ಇಲ್ಲಿನ ನೂತನ ಕಟ್ಟಡ ಕಾಮಗಾರಿಗಾಗಿ	20.00
		2.ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಹೋಮಿಯೋಪತಿ ಸಂಯುಕ್ತ ಆಸ್ಪತ್ರೆ, ಮಂಗಳೂರು	2.00
		ಒಟ್ಟು	**22.00**
3	2210–00–101–0–29 ಆಯಷ್ ಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳನ್ನು ತೆರೆಯುವುದು ಮತ್ತು ನಿರ್ವಹಣೆ	1. ಸ.ಆ.ಆ ಜೋಕಟ್ಟೆ, ಸ.ಆ.ಚಿಕಿತ್ಸಾಲಯಗಳಾದ ಬಳ್ಕುಂಜೆ, ಸಜಿಪಮೂಡ, ತಣ್ಣೀರುಪಂಥ, ಕಣಿಯೂರು, ಸ.ಹೋ.ಚಿ.ಗುರುಪುರ, ಇಲ್ಲಿನ ಅಧಿಕಾರಿ ಸಿಬ್ಬಂದಿಗಳಿಗೆ ವೇತನ ಭತ್ಯೆ ಪಾವತಿ ನಿರ್ವಹಣೆ	102.37
		2. ಸ.ಆ.ಆ ಜೋಕಟ್ಟೆ, ಸ.ಆ.ಚಿಕಿತ್ಸಾಲಯಗಳಾದ ಬಳ್ಕುಂಜೆ, ಸಜಿಪಮೂಡ, ತಣ್ಣೀರುಪಂಥ, ಕಣಿಯೂರು, ಸ.ಹೋ.ಚಿ.ಗುರುಪುರ, ಇಲ್ಲಿನ ಪ್ರಯಾಣಭತ್ಯೆ, ಕಛೇರಿ ವೆಚ್ಚ, ಹೊರಗುತ್ತಿಗೆ ಆಧಾರದ ಗ್ರೂಪ್ ಡಿ ನೌಕರರ ವೇತನ ಪಾವತಿ, ಅಗತ್ಯವಾಗಿ ಬೇಕಾಗಿರುವ ಪೀಠೋಪಕರಣಗಳು, ಉಪಕರಣಗಳು, ಇತರೆ ಸಾಮಾಗ್ರಿಗಳ ಖರೀದಿ, ನಿರ್ವಹಣೆ ಹಾಗೂ ಇತರೆ ಅಭಿವೃದ್ಧಿಗಾಗಿ	3.60

		2020–21ನೇ ಸಾಲಿಗೆ ಸ.ಆ.ಆ ಜೋಕಟ್ಟೆ, ಸ.ಆ.ಚಿಕಿತ್ಸಾಲಯಗಳಾದ ಬಳ್ಳುಂಜೆ, ಸಜಿಪಮೂಡ, ತಣ್ಣೀರುಪಂಥ, ಕಣಿಯೂರು, ಸ.ಹೋ.ಚಿ.ಗುರುಪುರ, ಇಲ್ಲಿನ ಹೊರಗುತ್ತಿಗೆ ಆಧಾರದ ಗ್ರೂಪ್ ಡಿ ನೌಕರರ ವೇತನ ಪಾವತಿ ನಿರ್ವಹಣೆಗಾಗಿ ಉಪಲೆಕ್ಕಶೀರ್ಷಿಕೆ 034ರಡಿ ಅನುದಾನ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.	
		ಒಟ್ಟು	**105.97**
4	2210–00–101–0–41 ಯುನಾನಿ ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ	1. ಸ.ಯು.ಚಿಕಿತ್ಸಾಲಯಗಳಾದ ಕೆರೆಕಾಡ್ ಮತ್ತು ಕಸ್ಬಾ–ಬೆಂಗ್ರೆ, ಇಲ್ಲಿನ ಅಧಿಕಾರಿ ಸಿಬ್ಬಂದಿಗಳಿಗೆ ವೇತನ ಭತ್ಯೆ ಪಾವತಿ ನಿರ್ವಹಣೆ	17.85
		2.ಸ.ಯು.ಚಿಕಿತ್ಸಾಲಯಗಳಾದ ಕೆರೆಕಾಡ್ ಮತ್ತು ಕಸ್ಬಾ–ಬೆಂಗ್ರೆ, ಇಲ್ಲಿನ ಪ್ರಯಾಣಭತ್ಯೆ, ಕಛೇರಿ ವೆಚ್ಚ, ಹೊರಗುತ್ತಿಗೆ ಆಧಾರದ ಗ್ರೂಪ್ ಡಿ ನೌಕರರ ವೇತನ ಪಾವತಿ, ಅಗತ್ಯವಾಗಿ ಬೇಕಾಗಿರುವ ಪೀಠೋಪಕರಣಗಳು, ಉಪಕರಣಗಳು, ಇತರೆ ಸಾಮಾಗ್ರಿಗಳ ಖರೀದಿ, ನಿರ್ವಹಣೆ ಹಾಗೂ ಇತರೆ ಅಭಿವೃದ್ಧಿಗಾಗಿ	4.00
		2020–21ನೇ ಸಾಲಿಗೆ ಸ.ಆ.ಆ ಜೋಕಟ್ಟೆ, ಸ.ಆ.ಚಿಕಿತ್ಸಾಲಯಗಳಾದ ಬಳ್ಳುಂಜೆ, ಸಜಿಪಮೂಡ, ತಣ್ಣೀರುಪಂಥ, ಕಣಿಯೂರು, ಸ.ಹೋ.ಚಿ.ಗುರುಪುರ, ಇಲ್ಲಿನ ಹೊರಗುತ್ತಿಗೆ ಆಧಾರದ ಗ್ರೂಪ್ ಡಿ ನೌಕರರ ವೇತನ ಪಾವತಿ ನಿರ್ವಹಣೆಗಾಗಿ ಉಪಲೆಕ್ಕಶೀರ್ಷಿಕೆ 034ರಡಿ ಅನುದಾನ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.	
		ಒಟ್ಟು	**21.85**
ಒಟ್ಟು ಮೊತ್ತ			**232.69**

ದಕ್ಷಿಣ ಕನ್ನಡ ಜಿಲ್ಲಾ ಆಯುಷ್ ಇಲಾಖೆಯ 2020–21ನೇ ಸಾಲಿನ ಪ್ರಗತಿಪರ ವೆಚ್ಚದ ವರದಿ

ಜಿಲ್ಲೆ: ದಕ್ಷಿಣಕನ್ನಡ		ತಿಂಗಳು: ಮಾರ್ಚ್ 2021

ಕ್ರ. ಸಂ	ಲೆಕ್ಕಶೀರ್ಷಿಕೆ	ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿಪಡಿಸಿದ ಅನುದಾನ			ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾದ ಅನುದಾನ			ಫೆಬ್ರವರಿ ಮಾಹೆಯ ಅಂತ್ಯಕ್ಕೆ ಆದ ವೆಚ್ಚ			ಮಾರ್ಚ್ ಮಾಹೆಯಲ್ಲಿ ಆದ ವೆಚ್ಚ			ಒಟ್ಟು ವೆಚ್ಚ		
		ವೇತನ	ವೇತ ನೇತರ	ಒಟ್ಟು	ವೇತನ	ವೇತ ನೇತರ	ಒಟ್ಟು	ವೇತನ	ವೇತನೇತರ	ಒಟ್ಟು	ವೇತನ	ವೇತ ನೇತರ	ಒಟ್ಟು	ವೇತನ	ವೇತ ನೇತರ	ಒಟ್ಟು
1	2210–00–101–0–35 opening & Maintenance of Hospitals & Dispensaries	73.27	9.60	**82.87**	67.20	9.60	**76.80**	60.76	5.07	**65.83**	6.41	4.52	**10.93**	67.17	9.59	**76.76**
2	2210–00–101–0–29 Opening of AYUSH Disp & Hospitals & Maintenance	102.37	3.60	**105.97**	94.71	15.60	**110.31**	85.14	5.92	**91.06**	7.90	0.30	**8.20**	93.04	6.22	**99.26**
3	2210–00–101–0–37 Drugs & Chemicals to ISM	0.00	15.00	**15.00**	0.00	15.00	**15.00**	0.00	8.05	**8.05**	0.00	6.94	**6.94**	0.00	14.99	**14.99**
4	2210–00–101–0–41 Opening and Maintenance of Unani Dispensaries	17.85	4.00	**21.85**	16.42	4.00	**20.42**	14.11	3.69	**17.80**	1.57	0.30	**1.87**	15.68	3.99	**19.67**
	ಒಟ್ಟು	**193.49**	**32.20**	**225.69**	**178.33**	**44.20**	**222.53**	**160.01**	**22.73**	**182.74**	**15.88**	**12.06**	**27.94**	**175.89**	**34.79**	**210.68**

ದಕ್ಷಿಣ ಕನ್ನಡ ಜಿಲ್ಲೆ ಆಯುಷ್ ಇಲಾಖೆಯ 2020–21ನೇ ಸಾಲಿಗೆ ಲಿಂಕ್ ದಾಖಲಾತಿಯಲ್ಲಿ ನಿಗದಿಯಾದ ಅನುದಾನದ ಮಾಹಿತಿ.

ಯೋಜನೆ

ಕ್ರ. ಸಂ	ಲೆಕ್ಕಶೀರ್ಷಿಕೆ	ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿಪಡಿಸಿದ ಅನುದಾನ		ಒಟ್ಟು
		ವೇತನ	ವೇತನೇತರ	
1	2210–00–00–101–0–35 ಆಯುಷ್ ಜಿಲ್ಲಾ ಆಸ್ಪತ್ರೆಗಳು ಮತ್ತು ಹೋಮಿಯೋಪತಿ ಜಿಲ್ಲಾ ಖಾಸಗಿ ಆಸ್ಪತ್ರೆಗಳಿಗೆ ಸಹಾಯಾನುದಾನ	73.27	9.60	**82.87**
2	2210–00–105–0–36 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಟ್ಟಡಗಳು (ಆಯುಷ್ ಸೇರಿದೆ)	0.00	22.00	**22.00**
3	2210–00–101–0–29 ಆಯಷ್ ಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳನ್ನು ತೆರೆಯುವುದು ಮತ್ತು ನಿರ್ವಹಣೆ	102.37	3.60	**105.97**
4	2210–00–101–0–37 ಆಯುಷ್ ಇಲಾಖೆಯ ಔಷಧಿ ಮತ್ತು ರಾಸಾಯನಿಕ	0.00	15.00	**15.00**
5	2210–00–101–0–41 ಯುನಾನಿ ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ	17.85	4.00	**21.85**
	ಒಟ್ಟು	**193.49**	**54.20**	**247.69**

2020–21ನೇ ಸಾಲಿನ ನ್ಯಾಯಾಲಯಕ್ಕೆ ಸಂಬಂಧಪಟ್ಟ ವಿವರಗಳು

ಕ್ರ.ಸಂ	ದಾವೆ ಸಂಖ್ಯೆ	ವಿಷಯ	ಪ್ರತಿವಾದಿಗಳ ವಿವರ	ವಕಾಲತ್ತು ಸಲ್ಲಿಸಿದ ದಿನಾಂಕ	ಕಂಡಿಕೆವಾರು ಷರಾ ಸಲ್ಲಿಸಿದ ವಿವರ	ಪ್ರಸ್ತುತ ಹಂತ
2020–21ನೇ ಸಾಲಿನಲ್ಲಿ ನ್ಯಾಯಾಲಯಕ್ಕೆ ಸಂಬಂಧಪಟ್ಟ ಪ್ರಕರಣಗಳು ಯಾವುದೂ ಇರುವುದಿಲ್ಲ.						

ದಕ್ಷಿಣಕನ್ನಡ ಜಿಲ್ಲೆ ಆಯುಷ್ ಇಲಾಖೆಯಲ್ಲಿ 2020–21ನೇ ಸಾಲಿಗೆ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಚಿಕಿತ್ಸೆ ಪಡೆದ ಹೊರರೋಗಿಗಳ ಆಯುಷ್ ಪ್ರಗತಿಯ ವಿವರ

ಕ್ರ.ಸಂ	ಆಸ್ಪತ್ರೆ/ಚಿಕಿತ್ಸಾಲಯಗಳ ಹೆಸರು	2020–21ನೇ ಸಾಲಿಗೆ ಚಿಕಿತ್ಸೆ ಪಡೆದ ರೋಗಿಗಳ ಅಂಕಿಅಂಶ ಪ್ರಗತಿಯ ವಿವರ
1	ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಹೋಮಿಯೋಪತಿ ಸಂಯುಕ್ತ ಆಸ್ಪತ್ರೆ, ಹ್ಯಾಟ್‌ಹಿಲ್ ಲಾಲ್‌ಬಾಗ್ ಮಂಗಳೂರು	8532
2	ಸರ್ಕಾರಿ ಆಯುರ್ವೇದ ಆಸ್ಪತ್ರೆ ತೋಕೂರು ಜೋಕಟ್ಟೆ ಮಂಗಳೂರು ತಾ	8969
3	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಬಳ್ಕುಂಜೆ ಮಂಗಳೂರು ತಾ	1771
4	ಸರ್ಕಾರಿ ಯುನಾನಿ ಚಿಕಿತ್ಸಾಲಯ ಕೆರೆಕಾಡೆ ಮಂಗಳೂರು ತಾ	3827
5	ಸರ್ಕಾರಿ ಯುನಾನಿ ಚಿಕಿತ್ಸಾಲಯ ಕಸ್ಬಾ–ಬೆಂಗ್ರೆ ಮಂಗಳೂರು ತಾ	3265
6	ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯ ಗುರುಪುರ ಮಂಗಳೂರು ತಾ	336
7	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಸಜಿಪಮೂಡ ಬಂಟ್ವಾಳ ತಾ	10,036
8	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ತಣ್ಣೀರುಪಂಥ ಬೆಳ್ತಂಗಡಿ ತಾ	3274
9	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಕಣಿಯೂರು ಬೆಳ್ತಂಗಡಿ ತಾ	7,310
10	ತಾಲೂಕು ಆಯುಷ್ ಘಟಕ, ಉಳ್ಳಾಲ	6,321
11	ಜಿಲ್ಲಾ ಆಸ್ಪತ್ರೆಯಲ್ಲಿ ಆಯುಷ್ ಘಟಕ (ಯುನಾನಿ ವಿಭಾಗ)	2394
	ಒಟ್ಟು	**56035**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳ ಕಟ್ಟಡಗಳ ಮಾಹಿತಿ

ಕ್ರ.ಸಂ	ಆಸ್ಪತ್ರೆ/ಚಿಕಿತ್ಸಾಲಯಗಳ ಹೆಸರು	ಕಟ್ಟಡ – ಸ್ವಂತ/ಬಾಡಿಗೆ/ಇತರ
1	ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಹೋಮಿಯೋಪತಿ ಸಂಯುಕ್ತ ಆಸ್ಪತ್ರೆ, ಹ್ಯಾಟ್‌ಹಿಲ್ ಲಾಲ್‌ಬಾಗ್ ಮಂಗಳೂರು	ಸ್ವಂತ
2	ಸರ್ಕಾರಿ ಆಯುರ್ವೇದ ಆಸ್ಪತ್ರೆ ತೋಕೂರು ಜೋಕಟ್ಟೆ ಮಂಗಳೂರು ತಾ	ಸ್ವಂತ
3	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಬಳ್ಳುಂಜೆ ಮಂಗಳೂರು ತಾ	ಸ್ವಂತ
4	ಸರ್ಕಾರಿ ಯುನಾನಿ ಚಿಕಿತ್ಸಾಲಯ ಕೆರೆಕಾಡ್ ಮಂಗಳೂರು ತಾ	ಸ್ವಂತ
5	ಸರ್ಕಾರಿ ಯುನಾನಿ ಚಿಕಿತ್ಸಾಲಯ ಕಸ್ಬಾ–ಬೆಂಗ್ರೆ ಮಂಗಳೂರು ತಾ	ಸ್ವಂತ ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗಿದೆ
6	ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯ ಗುರುಪುರ ಮಂಗಳೂರು ತಾ	ಸ್ವಂತ
7	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಸಜಿಪಮೂಡ, ಬಂಟ್ವಾಳ ತಾ	ಸ್ವಂತ
8	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ತಣ್ಣೀರುಪಂಥ ಬೆಳ್ತಂಗಡಿ ತಾ	ಸ್ವಂತ
9	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಕಣಿಯೂರು ಬೆಳ್ತಂಗಡಿ ತಾ	ಸ್ವಂತ
10	ತಾಲೂಕು ಆಯುಷ್ ಘಟಕ, ಉಳ್ಳಾಲ	ಸಮುದಾಯ ಆರೋಗ್ಯ ಕೇಂದ್ರ ಉಳ್ಳಾಲ ಇದರ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ
11	ಜಿಲ್ಲಾ ಆಸ್ಪತ್ರೆಯಲ್ಲಿ ಆಯುಷ್ ಘಟಕ (ಯುನಾನಿ ವಿಭಾಗ)	ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು ಇದರ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಆಸ್ಪತ್ರೆ/ಚಿಕಿತ್ಸಾಲಯಗಳು ಕಾರ್ಯನಿರ್ವಹಿಸಬೇಕಾದ ಸಮಯ:

ಬೆಳಿಗ್ಗೆ 9.00 ಗಂಟೆಯಿಂದ ಅಪರಾಹ್ನ 1.00 ಗಂಟೆಯವರೆಗೆ

ಅಪರಾಹ್ನ 1.00 ಗಂಟೆಯಿಂದ 1.45 ಗಂಟೆಯವರೆಗೆ ಊಟದ ಸಮಯ

ಅಪರಾಹ್ನ 1.45 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ

2020–21ನೇ ಸಾಲಿನಲ್ಲಿ ಪಡೆದುಕೊಂಡ ತರಬೇತಿಗಳ ವಿವರ

ಕ್ರ.ಸಂ	ತರಬೇತಿ ಜರುಗಿದ ತರಬೇತಿ ಕೇಂದ್ರದ ಹೆಸರು	ತರಬೇತಿ ವಿವರ	ತರಬೇತಿ ಜರುಗಿದ ಅವಧಿ	ತರಬೇತಿಗೆ ಹಾಜರಾದ ಅಧಿಕಾರಿಗಳ ನೌಕರರ ವಿವರ
1	ಆಡಳಿತ ತರಬೇತಿ ಸಂಸ್ಥೆ, ಮೈಸೂರು (ಆನ್‌ಲೈನ್ ತರಬೇತಿ)	ವಿಕೋಪದ ಸಮಯದಲ್ಲಿ ಆರೋಗ್ಯ ಸುರಕ್ಷಾ ನಿರ್ವಹಣೆ	25.06.2020	1.ಡಾ: ಅಜಿತನಾಥ ಇಂದ್ರ– ವೈದ್ಯಾಧಿಕಾರಿ, ಸ.ಆ.ಆ.ತೋಕೂರು ಜೋಕಟ್ಟೆ 2.ಡಾ:ಮಣಿಕರ್ಣಿಕ.ಕೆ.ಎ–ವೈದ್ಯಾಧಿಕಾರಿ, ಸ.ಆ.ಚಿ.ಸಜಿಪಮೂಡ
2	ಎಸ್.ಡಿ.ಎಂ ಆಯುರ್ವೇದ ಮೆಡಿಕಲ್ ಕಾಲೇಜು, ಉಡುಪಿ (ಆನ್‌ಲೈನ್ ತರಬೇತಿ)	ಪ್ರಾಥಮಿಕ ಆರೋಗ್ಯ ಸೇವೆಯಲ್ಲಿ ಆಯುರ್ವೇದ ಚಿಕಿತ್ಸೆ	19.09.2020	ಜಿಲ್ಲಾ ಆಯುಷ್ ಇಲಾಖಾ ಅಧೀನದ ಎಲ್ಲಾ ವೈದ್ಯಾಧಿಕಾರಿಗಳು
3	ಆಡಳಿತ ತರಬೇತಿ ಸಂಸ್ಥೆ, ಮೈಸೂರು (ಆನ್‌ಲೈನ್ ತರಬೇತಿ)	ಕರಾವಳಿ ವಿಪತ್ತು ಅಪಾಯ ಮಿತಗೊಳಿಸುವಿಕೆ	20.10.2020	ಡಾ:ಸೈಯದ್ ಝಾಹೀದ್ ಹುಸೇನ್– ವೈದ್ಯಾಧಿಕಾರಿ, ಆಯುಷ್ ವಿಭಾಗ, ಜಿಲ್ಲಾವೆನ್‌ಲಾಕ್ ಆಸ್ಪತ್ರೆ, ಮಂಗಳೂರು
4	ಆಡಳಿತ ತರಬೇತಿ ಸಂಸ್ಥೆ, ಮೈಸೂರು (ಆನ್‌ಲೈನ್ ತರಬೇತಿ)	ಹವಾಮಾನದ ಬದಲಾವಣೆಯ ರೂಪಾಂತರ ಮತ್ತು ವಿಕೋಪ ಅಪಾಯ ತಗ್ಗಿಸುವಿಕೆ	15.12.2020 ಹಾಗೂ 16.12.2020	1.ಡಾ: ಸಹನಾ ಪಾಂಡುರಂಗ–ವೈದ್ಯಾಧಿಕಾರಿ, ತಾಲೂಕು ಆಯುಷ್ ಘಟಕ ಉಳ್ಳಾಲ 2.ಡಾ:ಮಹಮದ್ ಅಶ್ಫಕ್ ಹುಸೇನ್– ವೈದ್ಯಾಧಿಕಾರಿ, ಸರ್ಕಾರಿ ಯುನಾನಿ ಚಿಕಿತ್ಸಾಲಯ, ಕೆರೆಕಾಡ್
5	ಎಸ್.ಡಿ.ಎಂ ಆಯುರ್ವೇದ ಮೆಡಿಕಲ್ ಕಾಲೇಜು, ಉಡುಪಿ	ಅಒಇ ಠಟಿ ಏಚಿಥಿಚಿಛಿಛಿಇಛಿಣಚಿ	01.03.2021 ರಿಂದ 06.03.2021	1.ಡಾ: ಯಶ್ವಿತಾ–ಗು.ವೈದ್ಯರು–ಜಿ.ಸ.ಆ.&ಹೋ.ಸಂ.ಆಸ್ಪತ್ರೆ, ಮಂಗಳೂರು 2.ಡಾ:ಬಸವರಾಜ ಶಿರೂರು–ಗು.ವೈದ್ಯರು–ಜಿ.ಸ.ಆ.&ಹೋ.ಸಂ.ಆಸ್ಪತ್ರೆ, ಮಂಗಳೂರು
6	ಆಯುಷ್ ನಿರ್ದೇಶನಾಲಯ, ಬೆಂಗಳೂರು (ಆನ್‌ಲೈನ್ ತರಬೇತಿ)	ಎನ್‌ಹೆಚ್‌ಎಂ (ಆಯುಷ್) ತರಬೇತಿ	04.03.2021 ರಿಂದ 06.03.2021	.ಡಾ: ಸಹನಾ ಪಾಂಡುರಂಗ–ವೈದ್ಯಾಧಿಕಾರಿ, ತಾಲೂಕು ಆಯುಷ್ ಘಟಕ ಉಳ್ಳಾಲ
7	ಆಯುಷ್ ನಿರ್ದೇಶನಾಲಯ, ಬೆಂಗಳೂರು (ಆನ್‌ಲೈನ್ ತರಬೇತಿ)	ಎನ್‌ಹೆಚ್‌ಎಂ (ಆಯುಷ್) ತರಬೇತಿ	08.03.2021 ರಿಂದ 10.03.2021	1.ಡಾ:ಸೈಯದ್ ಝಾಹೀದ್ ಹುಸೇನ್– ವೈದ್ಯಾಧಿಕಾರಿ, ಆಯುಷ್ ವಿಭಾಗ, ಜಿಲ್ಲಾವೆನ್‌ಲಾಕ್ ಆಸ್ಪತ್ರೆ, ಮಂಗಳೂರು 2.ಡಾ:ಮಣಿಕರ್ಣಿಕ.ಕೆ.ಎ–ವೈದ್ಯಾಧಿಕಾರಿ, ಸ.ಆ.ಚಿ.ಸಜಿಪಮೂಡ
8	ಆಯುಷ್ ನಿರ್ದೇಶನಾಲಯ, ಬೆಂಗಳೂರು (ಆನ್‌ಲೈನ್ ತರಬೇತಿ)	ಎನ್‌ಹೆಚ್‌ಎಂ (ಆಯುಷ್) ತರಬೇತಿ	15.03.2021 ರಿಂದ 17.03.2021	ಡಾ:ಶೋಭಾರಾಣಿ ಎನ್.ಎಸ್– ವೈದ್ಯಾಧಿಕಾರಿ, ಸ.ಆ.ಚಿ. ಬಳ್ಕುಂಜೆ
9	ಆಡಳಿತ ತರಬೇತಿ ಸಂಸ್ಥೆ, ಮೈಸೂರು (ಆನ್‌ಲೈನ್ ತರಬೇತಿ)	ಸುರಕ್ಷಿತ ನಗರಗಳು	18.03.2021 ರಿಂದ 19.03.2021	1.ಡಾ:ಸೈಯದ್ ಝಾಹೀದ್ ಹುಸೇನ್– ವೈದ್ಯಾಧಿಕಾರಿ, ಆಯುಷ್ ವಿಭಾಗ, ಜಿಲ್ಲಾವೆನ್‌ಲಾಕ್ ಆಸ್ಪತ್ರೆ, ಮಂಗಳೂರು 2.ಡಾ:ಮಣಿಕರ್ಣಿಕ.ಕೆ.ಎ–ವೈದ್ಯಾಧಿಕಾರಿ, ಸ.ಆ.ಚಿ.ಸಜಿಪಮೂಡ

ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ

ಸಾಮಾಜಿಕ ಅಸಮತೋಲನೆಯನ್ನು ಹೋಗಲಾಡಿಸಿ ಎಲ್ಲಾ ನಾಗರೀಕರಿಗೂ ಸಮಾನ ಅವಕಾಶ, ಹಕ್ಕು ಇರಬೇಕೆಂಬ ಉದ್ದೇಶದಿಂದ ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕಾಗಿ ಶಿಕ್ಷಣ, ಸಾಮಾಜಿಕ, ಆರ್ಥಿಕ, ಮೂಲಭೂತ ಸೌಲಭ್ಯ ಮತ್ತು ವೈಯಕ್ತಿಕ ಅಭಿವೃದ್ಧಿಗಳಿಗಾಗಿ ಜಿಲ್ಲಾಮಟ್ಟ, ತಾಲೂಕು ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಆಡಳಿತ ವ್ಯವಸ್ಥೆ

ಜಿಲ್ಲಾ ಮಟ್ಟದಲ್ಲಿ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರು ಕಾರ್ಯನಿರ್ವಾಹಿಸುತ್ತಿದ್ದು, ಇವರು ಇಲಾಖೆಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಸಹಯೋಗದಿಂದ ಜಿಲ್ಲಾ ಹಂತದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ತಾಲೂಕು ಮಟ್ಟದಲ್ಲಿ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರು ಮುಖ್ಯಸ್ಥರಾಗಿದ್ದು, ಇತರೆ ಸಿಬ್ಬಂದಿಗಳೊಂದಿಗೆ ಪರಿಶಿಷ್ಟ ಜಾತಿಯ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿಗಳ ವಿವರ:–

ಕ್ರ.ಸಂ	ವೃಂದಗಳು	ಮಂಜೂರಾದ ಹುದ್ದೆಗಳು	ಭರ್ತಿಯಾಗಿರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1.	ಎ	1	1	0
2.	ಬಿ	7	4	3
3.	ಸಿ	76	31	45
4.	ಡಿ	141	56	85
	ಒಟ್ಟು	225	92	133

ದ.ಕ ಜಿಲ್ಲೆಯಲ್ಲಿ 2011 ರ ಜನಗಣತಿ ಪ್ರಕಾರ ಒಟ್ಟು ಜನ ಸಂಖ್ಯೆ 20,89,649 ಆಗಿದ್ದು, ಇದರಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ 1,48,178 ಆಗಿದ್ದು, ಒಟ್ಟು ಜನಸಂಖ್ಯೆಯಲ್ಲಿ 7.09% ಇರುತ್ತದೆ. ತಾಲೂಕುವಾರು ವಿವರ ಈ ಕೆಳಗಿನಂತಿದೆ.

ಕ್ರ. ಸಂ	ತಾಲೂಕು	ನಗರ / Urban ಪರಿಶಿಷ್ಟ ಜಾತಿ			ಗ್ರಾಮೀಣ / Rural ಪರಿಶಿಷ್ಟ ಜಾತಿ			ಒಟ್ಟು			ಪ.ಜಾತಿ ಜನಸಂಖ್ಯೆ ಒಟ್ಟು ಜನ ಸಂಖ್ಯೆಗೆ ಹೋಲಿಸಿದಾಗ ಶೇಕಡಾವಾರು	ಸಾಕ್ಷರತೆ ಪ್ರಮಾಣ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು		ನಗರ	ಗ್ರಾಮಾಂತರ	ಒಟ್ಟು
1	ಮಂಗಳೂರು	16306	16994	33300	7956	8019	15975	24262	25013	49275	4.95	83.83	72.36	75.90
2	ಬಂಟ್ವಾಳ	1681	1727	3408	7904	7948	15852	9585	9675	19260	4.87			
3	ಪುತ್ತೂರು	2578	2690	5268	14524	14248	28772	17102	16938	34040	11.83			
4	ಸುಳ್ಯ	987	1085	2072	8962	9253	18215	9949	10338	20287	13.97			
5	ಬೆಳ್ತಂಗಡಿ	690	703	1393	11736	12187	23923	12426	12890	25316	9.50			
	ಒಟ್ಟು	22242	23199	45441	51082	51655	102737	73324	74854	148178	7.09			

- **ವಿದ್ಯಾರ್ಥಿ ನಿಲಯಗಳ ವಿವರ :**

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಸುಧಾರಣೆ ಹಾಗೂ ವಿದ್ಯಾಭ್ಯಾಸದ ಪ್ರೋತ್ಸಾಹಕ್ಕಾಗಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಇಲಾಖೆ ಅನುಷ್ಠಾನಗೊಳಿಸುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಗ್ರಾಮೀಣ ಮಟ್ಟದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಅನುಕೂಲಕ್ಕಾಗಿ 19 ಮೆಟ್ರಿಕ್ ಪೂರ್ವ

ವಿದ್ಯಾರ್ಥಿ ನಿಲಯಗಳು, 10 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು, 1 ಆಶ್ರಮ ಶಾಲೆ, 4 ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ 2 ಡಾ:ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಮತ್ತು 1 ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ. ಈ ನಿಲಯಗಳಲ್ಲಿ ಉಚಿತ ಊಟ, 2 ಜೊತೆ ಸಮವಸ್ತ್ರ, ಲೇಖನ ಸಾಮಗ್ರಿ, ಪಠ್ಯ ಪುಸ್ತಕ, ಹಾಸಿಗೆ–ಹೊದಿಕೆ ಇತರ ಅವಶ್ಯಕ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

- **ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ :**

ದೂರದ ಊರುಗಳಿಂದ ವಿದ್ಯಾಭ್ಯಾಸಕ್ಕೆ ಬರುವ 5 ರಿಂದ 10ನೇ ತರಗತಿಯ ಪ.ಜಾತಿ ಮಕ್ಕಳಿಗೆ ಮಾಹೆಯಾನ ರೂ. 1500/– ರಂತೆ ಖರ್ಚು ಮಾಡಿ, ಮೂರು ಹೊತ್ತು ಊಟ, ಸಂಜೆ ಕಾಫಿ, ತಿಂಡಿ ಮೊದಲಾದ ವ್ಯವಸ್ಥೆಯೊಂದಿಗೆ ವಸತಿ ವ್ಯವಸ್ಥೆ ಒದಗಿಸಲಾಗುತ್ತಿದೆ. ಇಲ್ಲಿ ಪ್ರತೀ ವಿದ್ಯಾರ್ಥಿಗೆ ವರ್ಷಕ್ಕೆ ರೂ. 400/– ರಂತೆ ಲೇಖನ ಸಾಮಗ್ರಿಗಳು, ಉಚಿತ ಪಠ್ಯ ಪುಸ್ತಕಗಳು, ರೂ. 450/– ವೆಚ್ಚದಲ್ಲಿ ಎರಡು ಜೊತೆ ಸಮವಸ್ತ್ರ ಅಲ್ಲದೆ, ತಿಂಗಳಿಗೆ ಗಂಡು ಮಕ್ಕಳಿಗೆ ರೂ.113.70 ಶುಚಿ ಸಂಭ್ರಮ ಕಿಟ್ ಮತ್ತು ಸ್ಯಾನಿಟೈಸರ್ ಹಾಗೂ ಹೆಣ್ಣು ಮಕ್ಕಳಿಗೆ ರೂ 148.75 ಸಿರಿಗಂಧ ಕಿಟ್ ಮತ್ತು ಸ್ಯಾನಿಟೈಸರ್ ಇತ್ಯಾದಿಗಳನ್ನು ನೀಡಲಾಗುತ್ತಿದೆ. ಒಟ್ಟು 2020–21ನೇ ಸಾಲಿನಲ್ಲಿ ನಿಲಯದ ನಿರ್ವಹಣೆಗಾಗಿ ರೂ. 587.73 ಲಕ್ಷ ನಿಗದಿ ಪಡಿಸಿಕೊಂಡಿದ್ದು, ಅದರಲ್ಲಿ ರೂ. 372.42 ಲಕ್ಷ ಖರ್ಚು ಮಾಡಲಾಗಿದೆ. 332 ವಿದ್ಯಾರ್ಥಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

- **ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು :**

ಕಾಲೇಜು ಮಟ್ಟದ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ 1600/– ರ ವೆಚ್ಚದಲ್ಲಿ ಊಟದ ವ್ಯವಸ್ಥೆ, ವಸತಿ ಸೌಕರ್ಯ ನೀಡಲಾಗುವುದು. ಆಡಳಿತ ವ್ಯವಸೆಗಾಗಿ ನಿಲಯ ಮೇಲ್ವಿಚಾರಕರು, ಹಾಗೂ ಗ್ರೂಪ್ ಡಿ ಸಿಬ್ಬಂದಿ ವರ್ಗದವರಿದ್ದಾರೆ. ಇಲಾಖಾ ಮುಖ್ಯಸ್ಥರು ಆಗಾಗ ತಪಾಸಣೆ ನಡೆಸುತ್ತಿರುವರು. ಜಿಲ್ಲೆಯಲ್ಲಿ 10 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ 2020–21ನೇ ಸಾಲಿನಲ್ಲಿ ನಿರ್ವಹಣೆ ಹಾಗೂ ಆಡಳಿತ ವ್ಯವಸ್ಥೆಗಳಿಗೆ ರೂ. 317.67 ಲಕ್ಷ ನಿಗದಿ ಪಡಿಸಿಕೊಂಡಿದ್ದು, ಅದರಲ್ಲಿ ರೂ. 236.76 ಲಕ್ಷ ಖರ್ಚು ಮಾಡಲಾಗಿದೆ. 636 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

- **ಆಶ್ರಮ ಶಾಲೆಗಳು :**

1 ರಿಂದ 5ನೇ ತರಗತಿವರೆಗೆ ವಸತಿ ವ್ಯವಸ್ಥೆಯೊಂದಿಗೆ ವಿದ್ಯಾಭ್ಯಾಸ ನೀಡುವ ವ್ಯವಸ್ಥೆ ಇದ್ದು, ಇಲ್ಲಿಯ ಮಕ್ಕಳಿಗೆ ಊಟೋಪಚಾರದ ವ್ಯವಸ್ಥೆಗಾಗಿ ಪ್ರತಿಯೊಂದು ವಿದ್ಯಾರ್ಥಿಗೆ ರೂ 1,300/– ರಂತೆ ಖರ್ಚು ಮಾಡಲಾಗುತ್ತದೆ. ಲೇಖನ ಸಾಮಾಗ್ರಿ, ಪಠ್ಯಪುಸ್ತಕ ಹಾಗೂ 2 ಜೊತೆ ಸಮವಸ್ತ್ರಗಳನ್ನು ಒದಗಿಸಲಾಗುತ್ತದೆ. 2020–21 ನೇ ಸಾಲಿನಲ್ಲಿ ಆಶ್ರಮ ಶಾಲೆಗೆ ರೂ 29.035 ಲಕ್ಷ ವೆಚ್ಚ ಭರಿಸಲಾಗಿದೆ.

- **ಮೊರಾರ್ಜಿ ದೇಸಾಯಿ ವಸತಿ ಶಾಲೆ :**

4 ಮೊರಾರ್ಜಿ ದೇಸಾಯಿ ವಸತಿ ಶಾಲೆ, 2 ಡಾ: ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಮತ್ತು 1 ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಗಳಿದ್ದು, ಪ್ರತಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಮಂಜೂರಾತಿ ಸಂಖ್ಯೆ 250 ಹಾಗೂ ಡಾ:ಬಿ.ಆರ್.ಅಂಬೇಡ್ಕರ್/ಇಂದಿರಾ ಗಾಂಧಿ ವಸತಿ ಶಾಲೆಗಳಲ್ಲಿ ಮಂಜೂರಾತಿ ಸಂಖ್ಯೆ 150 ರಂತೆ ಒಟ್ಟೂ ಮಂಜೂರಾತಿ ಸಂಖ್ಯೆ 1450 ಆಗಿದ್ದು ಪ್ರತಿ ವರ್ಷ 6 ನೇ ತರಗತಿಗೆ ಜಿಲ್ಲಾ ಮಟ್ಟದಲ್ಲಿ ಪ್ರವೇಶ ಪರೀಕ್ಷೆಯನ್ನು ನಡೆಸಿ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಇದು ಸಂಪೂರ್ಣ ವಸತಿ ಶಾಲೆಯಾಗಿದ್ದು ಶಾಲೆ ಹಾಗೂ ವಸತಿ ಸೌಲಭ್ಯವನ್ನು ಒಳಗೊಂಡಿರುತ್ತದೆ. ಶಾಲೆಯಲ್ಲಿ ಪ್ರಾಂಶುಪಾಲರು ಹಾಗೂ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಯವರು ಹಾಗೂ ವಸತಿ ನಿಲಯದಲ್ಲಿ ನಿಲಯ ಮೇಲ್ವಿಚಾರಕರು ಹಾಗೂ ಅಡುಗೆ ಸಿಬ್ಬಂದಿಯವರು ಕರ್ತವ್ಯ ನಿರ್ವಹಿಸುತ್ತಾರೆ. 6 ರಿಂದ 10ನೇ ತರಗತಿಯಲ್ಲಿ ಕಲಿಯುವ ಪ್ರತಿ ವಿದ್ಯಾರ್ಥಿಗೆ ನಿರ್ವಹಣೆ ವೆಚ್ಚ ಮಾಸಿಕ ರೂ. 1600/– ನೀಡಲಾಗುವುದು. ಹಾಗೂ ಪಠ್ಯ ಪುಸ್ತಕ, ಸಮವಸ್ತ್ರ, ವೈದ್ಯಕೀಯ ಸೌಲಭ್ಯವನ್ನು ಕಲ್ಪಿಸಲಾಗುವುದು. 2020–21ನೇ ಸಾಲಿನಲ್ಲಿ 1339 ವಿದ್ಯಾರ್ಥಿಗಳ ಸೇರ್ಪಡೆಯಾಗಿರುತ್ತದೆ.

- **ಪ್ರೋತ್ಸಾಹಧನ :**

ಪಿ.ಯು.ಸಿ, ಪದವಿ, ಸ್ನಾತಕೋತ್ತರ ಪದವಿ ಮತ್ತು ಬಿ.ಇ, ಎಂ.ಬಿ.ಬಿ.ಎಸ್, ಬಿ.ಎಸ್ಸಿ, (ಹಾರ್ಟಿಕಲ್ಚರ್)ಗಳ ಅಂತಿಮ ತರಗತಿಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ಪ್ರೋತ್ಸಾಹ ಧನ ಮಂಜೂರು ಮಾಡಲಾಗುವುದು. 2020–21ನೇ ಸಾಲಿನಲ್ಲಿ ರೂ. 320.50 ಲಕ್ಷ ನಿಗದಿ ಪಡಿಸಿಕೊಂಡಿದ್ದು, ಅದರಲ್ಲಿ ರೂ. 320.50 ಲಕ್ಷ ಖರ್ಚು ಮಾಡಲಾಗಿದೆ. 1381 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯ ಕಾರ್ಯವ್ಯಾಪ್ತಿಯಲ್ಲಿ ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ ತಾಲೂಕುಗಳು ಒಳಗೊಂಡಿವೆ. 2011ನೇ ಜನಗಣತಿಯ ಪ್ರಕಾರ 82268 ಪರಿಶಿಷ್ಟ ವರ್ಗದ ಜನಸಂಖ್ಯೆ ಈ 5 ತಾಲೂಕುಗಳಲ್ಲಿದೆ. ಪರಿಶಿಷ್ಟ ವರ್ಗದ ಜನಾಂಗದವರ ಪೈಕಿ ಮರಾಠಿ, ಮಲೆಕುಡಿಯ ಹಾಗೂ ಕೊರಗ ಜನಾಂಗದವರು ಹೆಚ್ಚಾಗಿ ವಾಸಿಸುತ್ತಿದ್ದು, ಇವರಲ್ಲಿ ಆದಿಯುಗ ಪಂಗಡಕ್ಕೆ ಸೇರಿದ ಕೊರಗ ಜನಾಂಗದವರು ಅತೀ ಹಿಂದುಳಿದವರಾಗಿರುತ್ತಾರೆ.

ಯೋಜನ ಕಾರ್ಯಕ್ರಮಗಳು:–

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ 9 ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳು, 5 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು, 12 ಆಶ್ರಮಶಾಲೆಗಳು, ಕಾರ್ಯ ನಿರ್ವಹಿಸುತ್ತಿದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ 392 ಮಂಜೂರಾತಿ ಸಂಖ್ಯೆಯಲ್ಲಿ 271 ಮಕ್ಕಳು, ಆಶ್ರಮಶಾಲೆಗಳಲ್ಲಿ 1075 ಮಂಜೂರಾತಿ ಸಂಖ್ಯೆಯಲ್ಲಿ 810 ಮಕ್ಕಳು ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ 450 ಮಂಜೂರಾತಿ ಸಂಖ್ಯೆಯಲ್ಲಿ 256 ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.

ಆಶ್ರಮ ಶಾಲೆಗಳು :– 12 ಆಶ್ರಮಶಾಲೆಗಳು:

1 ರಿಂದ 5ನೇ ತರಗತಿ ವರೆಗೆ ವಸತಿ ವ್ಯವಸ್ಥೆಯೊಂದಿಗೆ ವಿದ್ಯಾಭ್ಯಾಸ ನೀಡುವ ವ್ಯವಸ್ಥೆ ಇದ್ದು, ಇಲ್ಲಿಯ ಮಕ್ಕಳಿಗೆ ಊಟೋಪಚಾರದ ವ್ಯವಸ್ಥೆಗಾಗಿ ಪ್ರತಿಯೊಂದು ವಿದ್ಯಾರ್ಥಿಗೆ ರೂ.1300/–ರಂತೆ ಖರ್ಚು ಮಾಡಲಾಗುತ್ತದೆ. ಲೇಖನಸಾಮಾಗ್ರಿ, ಪಠ್ಯಪುಸ್ತಕ ಹಾಗೂ 2 ಜೊತೆ ಸಮವಸ್ತ್ರಗಳನ್ನು ಒದಗಿಸಲಾಗುತ್ತದೆ. 2020–21ನೇ ಸಾಲಿನಲ್ಲಿ ಆಶ್ರಮಶಾಲೆಗಳಿಗೆ ರೂ.198.95 ಲಕ್ಷ ವೆಚ್ಚ ಭರಿಸಲಾಗಿದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು : 9 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು:

6 ರಿಂದ 10ನೇ ತರಗತಿಯ ದೂರದ ಊರುಗಳಿಂದ ವಿದ್ಯಾಭ್ಯಾಸಕ್ಕೆ ಬರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.1500/–ರಂತೆ ಖರ್ಚು ಮಾಡಿ, 3 ಹೊತ್ತು ಊಟ, ಸಂಜೆ ಕಾಫಿ ತಿಂಡಿ ಮೊದಲಾದ ವ್ಯವಸ್ಥೆಯೊಂದಿಗೆ ವಸತಿವ್ಯವಸ್ಥೆ ಒದಗಿಸಲಾಗುತ್ತದೆ . ಇಲ್ಲಿ ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ರೂ.400.00ರಂತೆ ಪಠ್ಯಪುಸ್ತಕ, ಲೇಖನಸಾಮಾಗ್ರಿಗಳು ರೂ.400.00ರಂತೆ ವೆಚ್ಚದಲ್ಲಿ 2 ಜೊತೆ ಸಮವಸ್ತ್ರಗಳನ್ನು, ರೂ.300.00ರಂತೆ ವೆಚ್ಚದಲ್ಲಿ ಶೂ ಮತ್ತು ಸಾಕ್ಸ್‌ಗಳನ್ನು, ಅಲ್ಲದೆ ತಿಂಗಳಿಗೆ ಬಾಲಕರಿಗೆ ರೂ.78.00ರ ವೆಚ್ಚದಲ್ಲಿ ಮತ್ತು ಬಾಲಕಿಯರಿಗೆ ರೂ.109.00ವೆಚ್ಚದಂತೆ ಸಾಬೂನು, ಎಣ್ಣೆ, ಮೊದಲಾದ ವೆಚ್ಚಗಳನ್ನು ಮಾಡಲಾಗುತ್ತಿದೆ. 2020–21ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳಿಗೆ ರೂ.146.34 ಲಕ್ಷ ವೆಚ್ಚ ಭರಿಸಲಾಗಿದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು : 5 ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು:

2020–21ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಒಬ್ಬ ವಿದ್ಯಾರ್ಥಿಗೆ ರೂ.1600/–ರಂತೆ ಪ್ರತಿ ತಿಂಗಳಿಗೆ ಊಟೋಪಚಾರಕ್ಕಾಗಿ ಖರ್ಚು ಮಾಡಲಾಗುತ್ತಿದೆ. ಹಾಗೂ ಬಾಲಕರಿಗೆ ರೂ.78.00 ರ ವೆಚ್ಚದಲ್ಲಿ ಮತ್ತು ಬಾಲಕಿಯರಿಗೆ ರೂ.109.00 ವೆಚ್ಚದಂತೆ ಸಾಬೂನು, ಎಣ್ಣೆ, ಮೊದಲಾದ ವೆಚ್ಚಗಳನ್ನು ಮಾಡಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ರೂ.389.69 ಲಕ್ಷ ವೆಚ್ಚ ಮಾಡಲಾಗಿದೆ.

ವಿದ್ಯಾರ್ಥಿವೇತನ:

ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ 1778 ವಿದ್ಯಾರ್ಥಿಗಳಿಗೆ ರೂ.381.86 ಲಕ್ಷ ಹಾಗೂ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ 6911 ಮಕ್ಕಳಿಗೆ ರೂ.142.86 ಲಕ್ಷ ಅನುದಾನ ವೆಚ್ಚ ಮಾಡಲಾಗಿದೆ.

ಶೈಕ್ಷಣಿಕ/ಅಂತರ್ ಜಾತಿ ಪ್ರೋತ್ಸಾಹ ಧನ:

ಅ) ಪರಿಶಿಷ್ಟ ಪಂಗಡಕ್ಕೆ ಸೇರಿದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಪ್ರಥಮ ಪ್ರಯತ್ನದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗುವ 913 ವಿದ್ಯಾರ್ಥಿಗಳಿಗೆ ರೂ.211.00 ಲಕ್ಷ ಪ್ರೋತ್ಸಾಹಧನ ಮಂಜೂರು ಮಾಡಲಾಗಿದೆ.

ಆ) ಅಂತರ್ ಜಾತಿ ವಿವಾಹವಾದಲ್ಲಿ ಪರಿಶಿಷ್ಟ ಪಂಗಡದವರಿಗೆ ಪ್ರೋತ್ಸಾಹ ಧನ ನೀಡುವ ಯೋಜನೆಯಡಿ 10 ದಂಪತಿಗಳಿಗೆ ರೂ.30.00 ಲಕ್ಷ ಪ್ರೋತ್ಸಾಹ ಧನ ಮಂಜೂರು ಮಾಡಲಾಗಿದೆ.

ಗಿರಿಜನ ಉಪಯೋಜನೆ ಕಾರ್ಯಕ್ರಮಗಳು:

ಗಿರಿಜನ ಉಪಯೋಜನೆಯಲ್ಲಿ 2020–21ನೇ ಸಾಲಿನಲ್ಲಿ ರಾಜ್ಯ ಯೋಜನೆಯಲ್ಲಿ ಪರಿಶಿಷ್ಟ ವರ್ಗಗಳ ಕುಟುಂಬಗಳ ಸಹಾಯಧನಕ್ಕಾಗಿ ರೂ.28.00ಲಕ್ಷ ಹಾಗೂ ಮೂಲಭೂತ ಸೌಕರ್ಯ ಯೋಜನೆಯಡಿ ರೂ.35.00ಲಕ್ಷ ಒಟ್ಟು ರೂ.63.00ಲಕ್ಷ ಗುರಿ ನಿಗದಿಪಡಿಸಿದ್ದು, ಇದರಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ ರೂ.28.00 ಲಕ್ಷ ಹಾಗೂ ಮೂಲಭೂತ ಸೌಕರ್ಯ ಯೋಜನೆಯಡಿ ರೂ.35.00ಲಕ್ಷ, ಒಟ್ಟು ರೂ.62.80 ಲಕ್ಷ ಅನುದಾನವನ್ನು 31.3.2021 ರ ಅಂತ್ಯಕ್ಕೆ ವಿನಿಯೋಗಿಸಿ, ಶೇಕಡಾ 99.68 ರಷ್ಟು ಪ್ರಗತಿ ಸಾಧಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ಸರಕಾರವು ಹಿಂದುಳಿದ ವರ್ಗಗಳ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಿ ಸಾಮಾಜಿಕ ನ್ಯಾಯ ನೀಡುವ ದೃಷ್ಟಿಯಿಂದ 1977ರಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯವನ್ನು ಸೃಷ್ಟಿಸಿತು. ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಹಾಗೂ ಆರ್ಥಿಕ ನೆರವು ನೀಡಿ ಅವರನ್ನು ಪ್ರಗತಿಯ ಮುಖ್ಯವಾಹಿನಿಯಲ್ಲಿ ಸೇರಿಸುವುದು ಇಲಾಖೆಯ ಮುಖ್ಯ ಗುರಿಯಾಗಿದೆ. ಈ ಸಂದರ್ಭದಲ್ಲಿ ಈ ವರ್ಗಗಳ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಅನೇಕ ಕಾರ್ಯಕ್ರಮಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ಕೈಗೊಳ್ಳಲಾಗಿದೆ. ಮಾತ್ರವಲ್ಲದೆ ಇಲಾಖಾ ವಸತಿ ನಿಲಯಗಳನ್ನು/ಮೊರಾರ್ಜಿ ದೇಸಾಯಿ ನವೋದಯ ಮಾದರಿ ವಸತಿ ಶಾಲೆಗಳನ್ನು/ಆಶ್ರಮ ಶಾಲೆಗಳನ್ನು/ಹೊಲಿಗೆ ತರಭೇತಿ ಕೇಂದ್ರಗಳನ್ನು/ಪರೀಕ್ಷಾ ಪೂರ್ವ ತರಭೇತಿ ಕೇಂದ್ರಗಳನ್ನು/ಮಹಿಳಾ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಿ ಅಗತ್ಯ ಸಿಬ್ಬಂದಿಗಳನ್ನು ಒದಗಿಸಿ ನಿರ್ವಹಿಸಲಾಗುತ್ತಿದೆ. ವಸತಿ ನಿಲಯಗಳ ವಿದ್ಯಾರ್ಥಿಗಳಿಗೆ ಉಚಿತ ಊಟೋಪಹಾರಗಳು, ಸಮವಸ್ತ್ರ, ಲೇಖನ ಸಾಮಾಗ್ರಿಗಳನ್ನು ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ಖಾಸಗಿ ವಿದ್ಯಾರ್ಥಿ ನಿಲಯಗಳಲ್ಲಿ/ಅನಾಥಾಲಯಗಳಲ್ಲಿ ವಸತಿ ಕಲ್ಪಿಸಲಾಗಿರುವ ವಿದ್ಯಾರ್ಥಿ/ಅನಾಥ/ನಿರ್ಗತಿಕ ಮಕ್ಕಳ ಶ್ರೇಯೋಭಿವೃದ್ಧಿಯ ದೃಷ್ಟಿಯಿಂದ ಇಲಾಖಾ ವತಿಯಿಂದ ಸಹಾಯಧನವನ್ನು ನೀಡಲಾಗುತ್ತಿದೆ. ಪ್ರತೀ ವರ್ಷ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ವಿದ್ಯಾರ್ಥಿ ವೇತನ/ಹೆಚ್ಚುವರಿ ಭೋಜನಾ ವೆಚ್ಚ/ಪ್ರೋತ್ಸಾಹಧನ/ಶುಲ್ಕವಿನಾಯಿತಿ/ತರಭೇತಿ ಭತ್ಯೆಗಳನ್ನು ನೀಡಲಾಗುತ್ತಿದೆ. ಹಿಂದುಳಿದ ವರ್ಗಗಳ ಸಾಮಾಜಿಕ/ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಸ್ವಯಂ ಸೇವಾ ಸಂಸ್ಥೆಗಳಿಂದ ನಿರ್ಮಿಸಲ್ಪಡುವ ಸಮುದಾಯಭವನ ಕಟ್ಟಡಗಳ ನಿರ್ಮಾಣಕ್ಕಾಗಿ ಇಲಾಖಾ ವತಿಯಿಂದ ಸಹಾಯಧನವನ್ನು ನೀಡಲಾಗುತ್ತಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರ:–

1) ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು:

ಮಾಧ್ಯಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಣವನ್ನು ಮುಂದುವರೆಸಲು ಶಾಲೆಗಳು ಇಲ್ಲದೇ ಇರುವ ಗ್ರಾಮಗಳಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ಅವರ ಶಿಕ್ಷಣವನ್ನು ಮುಂದುವರೆಸಿಕೊಂಡು ಹೋಗಲು ಅನುಕೂಲ ಕಲ್ಪಿಸಿಕೊಡುವ ಸಲುವಾಗಿ ಶಿಕ್ಷಣ ಸಂಸ್ಥೆ (ಶಾಲೆಗಳು) ನಡೆಯುತ್ತಿರುವ ಸ್ಥಳಗಳಲ್ಲಿ ಮೆಟ್ರಿಕ್ ಪೂರ್ವ ಬಾಲಕರ/ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ನಡೆಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇಂತಹ ಕಾರ್ಯಕ್ರಮದಿಂದ ಸಾಮಾಜಿಕ ಸಾಮರಸ್ಯ ಕಾಯ್ದುಕೊಳ್ಳುವ ಉದ್ದೇಶದಿಂದ ಈ ವಿದ್ಯಾರ್ಥಿ ನಿಲಯಗಳಲ್ಲಿನ ಮಂಜೂರಾತಿ ಸಂಖ್ಯೆಯ ಶೇಕಡಾ 25ರಷ್ಟು ಸ್ಥಾನಗಳನ್ನು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 13 ಬಾಲಕರ ಮತ್ತು 11 ಬಾಲಕಿಯರ ಒಟ್ಟು 24 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ.

2) ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು:

ಗ್ರಾಮಾಂತರ ಪ್ರದೇಶಗಳಿಗೆ ಸೇರಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ವಿವಿಧ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಶಿಕ್ಷಣವನ್ನು ಮುಂದುವರೆಸಿಕೊಂಡು ಹೋಗಲು ಅನುಕೂಲ ಕಲ್ಪಿಸಿಕೊಡುವ ಸಲುವಾಗಿ ಶಿಕ್ಷಣ ಸಂಸ್ಥೆ (ಕಾಲೇಜುಗಳು) ನಡೆಯುತ್ತಿರುವ ಸ್ಥಳಗಳಲ್ಲಿ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 17 ಪುರುಷರ ಮತ್ತು 32 ಮಹಿಳೆಯರ ಒಟ್ಟು 49 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ.

3) <u>ಶುಲ್ಕ ವಿನಾಯಿತಿ ಕಾರ್ಯಕ್ರಮ:–</u>

ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದು (ಕಾಲೇಜುಗಳಲ್ಲಿ) ವಿದ್ಯಾರ್ಥಿಗಳ ಪೋಷಕರ ಕುಟುಂಬದ ವಾರ್ಷಿಕ ಆದಾಯ ಪ್ರವರ್ಗ–1 ರ ವಿದ್ಯಾರ್ಥಿಗಳಿಗೆ ರೂ. 2.50 ಲಕ್ಷ ಮತ್ತು ಪ್ರವರ್ಗ 2ಎ, ಪ್ರವರ್ಗ 3ಎ, ಪ್ರವರ್ಗ 3ಬಿ(ಕ್ರಿಶ್ಚಿಯನ್ ಮತ್ತು ಜೈನ್ ಹೊರತುಪಡಿಸಿ) ರೂ. 1.00 ಲಕ್ಷ ಅಥವಾ ಅದಕ್ಕಿಂತ ಕಡಿಮೆಯಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದರೆ ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಭೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಪರೀಕ್ಷಾ ಶುಲ್ಕ, ಕ್ರೀಡಾ ಶುಲ್ಕ ಮತ್ತು ಗ್ರಂಥಾಲಯ ಶುಲ್ಕಗಳಿಗೆ ವಿನಾಯಿತಿ ನೀಡಲಾಗುತ್ತದೆ. 2020–21ನೇ ಸಾಲಿನಲ್ಲಿ ಶುಲ್ಕವಿನಾಯಿತಿ ಯೋಜನೆಯಡಿ ಒಟ್ಟು ರೂ.1708.50 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ಬಾಬ್ತು ಮಾರ್ಚ್ 2021ರ ಅಂತ್ಯಕ್ಕೆ ರೂ.1708.50 ಲಕ್ಷ ಖರ್ಚು ಭರಿಸಲಾಗಿದ್ದು, ಶೇಕಡಾ 100% ಪ್ರಗತಿ ಸಾಧಿಸಲಾಗಿದೆ.

4) ಹಿಂದುಳಿದ ವರ್ಗಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ (ಕೇಂದ್ರ ಪುರಸ್ಕೃತ ಕಾರ್ಯಕ್ರಮ):–

ರಾಜ್ಯ ಸರ್ಕಾರವು ಅನುಷ್ಠಾನಗೊಳಿಸುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಕಾರ್ಯಕ್ರಮದೊಂದಿಗೆ ಅಲೈನ್ (ಂಟುಂಟಿ) ಮಾಡಿ ಅನುಷ್ಠಾನಗೊಳಿಸಲಾಗುತ್ತಿದ್ದು, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಮಂಜೂರಾತಿ ಪ್ರಾಧಿಕಾರಿಗಳಾಗಿರುತ್ತಾರೆ. 2020–21ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಯೋಜನೆಯಡಿ ಒಟ್ಟು ರೂ.73.92 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ಬಾಬ್ತು ಮಾರ್ಚ್ 2021 ರ ಅಂತ್ಯಕ್ಕೆ ರೂ.73.37 ಲಕ್ಷ ಖರ್ಚು ಭರಿಸಲಾಗಿದ್ದು, ಶೇಕಡಾ 99.25% ಪ್ರಗತಿ ಸಾಧಿಸಲಾಗಿದೆ. 2020–21ನೇ ಸಾಲಿನಲ್ಲಿ ಒಟ್ಟು 7337 ಫಲಾನುಭವಿಗಳು ಯೋಜನೆಯ ಸದುಪಯೋಗ ಪಡೆದುಕೊಂಡಿರುತ್ತಾರೆ.

5) ಇಲಾಖಾ ವಿದ್ಯಾರ್ಥಿ ನಿಲಯಗಳ ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ:

ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಇಲಾಖಾ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ವಿವಿಧ ಪಬ್ಲಿಕ್ ಪರೀಕ್ಷೆಗಳಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಲು ಉತ್ತೇಜನ ನೀಡುವ ಹಾಗೂ ಸ್ಪರ್ಧಾತ್ಮಕ ಮನೋಭಾವ ಮೂಡಿಸುವ ದೃಷ್ಟಿಯಿಂದ ವಾರ್ಷಿಕ ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವ ಯೋಜನೆಯನ್ನು ರೂಪಿಸಲಾಗಿದ್ದು, ಈ ಕಾರ್ಯಕ್ರಮದಡಿ ಒಟ್ಟು ರೂ 52.06 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ಬಾಬ್ತು ಮಾರ್ಚ್ 2021 ರ ಅಂತ್ಯಕ್ಕೆ ರೂ.39.27 ಲಕ್ಷ ಖರ್ಚು ಭರಿಸಲಾಗಿದ್ದು, ಶೇಕಡಾ 75.43% ಪ್ರಗತಿ ಸಾಧಿಸಲಾಗಿದೆ. 2020–21ನೇ ಸಾಲಿನಲ್ಲಿ ಒಟ್ಟು 1956 ಫಲಾನುಭವಿಗಳು ಯೋಜನೆಯ ಸದುಪಯೋಗ ಪಡೆದುಕೊಂಡಿರುತ್ತಾರೆ.

6) ದೇವರಾಜ ಅರಸು ಜನ್ಮ ದಿನಾಚರಣೆ:

ಹಿಂದುಳಿದ ವರ್ಗಗಳ ಏಳಿಗೆಗಾಗಿ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳ ಬಗ್ಗೆ ಹಿಂದುಳಿದ ವರ್ಗಗಳ ಜನಾಂಗದವರ ಸಮಾವೇಶ ಹಾಗೂ ವಿಚಾರಸಂಕಿರಣಗಳನ್ನು ನಡೆಸಿ ವ್ಯಾಪಕ ಪ್ರಚಾರ ಮಾಡಲು ದಿವಂಗತ ದೇವರಾಜ ಅರಸು ಜನ್ಮದಿನಾಚರಣೆಯನ್ನು ಪ್ರತೀ ವರ್ಷ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಆಚರಿಸಲಾಗುತ್ತಿದೆ.

7) ಹೊಲಿಗೆ ತರಬೇತಿ ಕೇಂದ್ರಗಳು :

ಹಿಂದುಳಿದ ವರ್ಗಗಳಿಗೆ ಸೇರಿದ ಮಹಿಳೆಯರು ಹೊಲಿಗೆ ಕಸುಬಿನಲ್ಲಿ ನುರಿತು ಸ್ವಯಂ ಉದ್ಯೋಗದಲ್ಲಿ ತೊಡಗಿ ಜೀವನ ನಡೆಸುವಂತಾಗಲು ಈ ಕೇಂದ್ರಗಳನ್ನು ನಡೆಸಲಾಗುತ್ತಿದ್ದು, ಅಭ್ಯರ್ಥಿಗಳ ಆಯ್ಕೆಯಲ್ಲಿ ವಿಧವೆಯರು ಮತ್ತು ನಿರ್ಗತಿಕರಿಗೆ ಆದ್ಯತೆ ನೀಡಲಾಗುವುದು. ಜಿಲ್ಲೆಯಲ್ಲಿ ಬೆಳ್ತಂಗಡಿ ಮತ್ತು ಪುತ್ತೂರು ತಾಲೂಕಿನಲ್ಲಿ 2 ಹೊಲಿಗೆ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, 40 ಫಲಾನುಭವಿಗಳು ಯೋಜನೆಯ ಸದುಪಯೋಗ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

8) ವಸತಿ ನಿಲಯಗಳ ಸುಧಾರಣಾ ಕಾರ್ಯಕ್ರಮ:

ಇಲಾಖಾ ವಿದ್ಯಾರ್ಥಿ ನಿಲಯಗಳಿಗೆ ಅಗತ್ಯವಾಗಿ ಬೇಕಾಗುವ ಪಾತ್ರೆ, ಪೀಠೋಪಕರಣಗಳು, ಆಟದ ಸಾಮಾಗ್ರಿ ಹಾಗೂ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗುವ ಸಾಮಗ್ರಿಗಳನ್ನು ಖರೀದಿಸಿ ಪೂರೈಸುವುದರ ಮೂಲಕ ಈ ಸಂಸ್ಥೆಗಳ ನಿರ್ವಹಣೆಯನ್ನು ಸುಧಾರಿಸಲು ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

9) ವಿವಿಧ ಸಮುದಾಯಗಳ ಅಭಿವೃದ್ಧಿ:

ಹಿಂದುಳಿದ ವರ್ಗಗಳ ಕುಂಬಾರ, ಕ್ಷತ್ರಿಯ, ಮಡಿವಾಳ, ವಿಶ್ವಕರ್ಮ, ಕಮ್ಮಾರ, ಬಿಲ್ಲವ, ದೇವಾಂಗ, ಕುರುಬ ಮುಂತಾದ ಸಮುದಾಯಗಳಿಗೆ ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಮಾಡಲು ಅಂತಹ ಸಮುದಾಯಗಳ ಸ್ವಯಂ ಸೇವಾ ಸಂಸ್ಥೆಗಳು ಮುಂದೆ ಬಂದಲ್ಲಿ ಅಂತಹ ಸಂಸ್ಥೆಗಳು ಜಿಲ್ಲಾ ಕೇಂದ್ರಸ್ಥಾನದಲ್ಲಿ ನಿರ್ಮಿಸುವ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ ರೂ.50.00 ಲಕ್ಷ ಸಹಾಯಧನ, ತಾಲೂಕು ಕೆಂದ್ರದಲ್ಲಿ ನಿರ್ಮಿಸುವುದಿದ್ದಲ್ಲಿ ರೂ.25.00 ಲಕ್ಷ ಸಹಾಹಧನ ಮತ್ತು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಿರ್ಮಿಸುವುದಿದ್ದಲ್ಲಿ ರೂ.10.00 ಲಕ್ಷ ಅಥವಾ ಕಟ್ಟಡದ ಒಟ್ಟಾರೆ ವೆಚ್ಚದ ಶೇ.50 ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತವನ್ನು ಸಹಾಯಧನ ರೂಪದಲ್ಲಿ ಮಂಜೂರು ಮಾಡಲು ಅವಕಾಶವಿರುತ್ತದೆ.

10) ಅಲೆಮಾರಿ/ಅರೆಅಲೆಮಾರಿ ಜನಾಂಗದವರ ಅಭಿವೃದ್ಧಿಗೆ ಕಾರ್ಯಕ್ರಮಗಳು:–

ಅಲೆಮಾರಿ/ಅರೆಅಲೆಮಾರಿ ಜನಾಂಗದ 5ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿಕೆ, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ (ಮೆರಿಟ್) ವಿದ್ಯಾರ್ಥಿ ವೇತನ ನೀಡಿಕೆ, ರಾಜ್ಯದ ಪ್ರತೀಷ್ಠಿತ ಶಾಲೆಗಳಲ್ಲಿ ಈ ಜನಾಂಗದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಮತ್ತು ನಿರ್ವಹಣೆ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ.

11) ಖಾಸಗಿ ಅನುದಾನಿತ ಅನಾಥಾಲಯಗಳು:

ಅನಾಥ ಮತ್ತು ನಿರ್ಗತಿಕ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಅನಾಥಾಲಯಗಳನ್ನು ನಡೆಸುತ್ತಿವೆ. ಈ ಅನಾಥಾಲಯಗಳಲ್ಲಿ ಮಕ್ಕಳನ್ನು ಅವರ ಪ್ರೌಢ ಶಾಲಾ ಶಿಕ್ಷಣ ಮುಗಿಯುವವರೆಗೆ ಪೋಷಿಸಲು ಅವಕಾಶ ಕಲ್ಪಿಸಲಾಗುತ್ತದೆ. ಇಂತಹ ಅನಾಥಾಲಯಗಳಿಗೆ ಪ್ರೋತ್ಸಾಹ/ನೆರವು ನೀಡುವ ದೃಷ್ಟಿಯಿಂದ ಸಹಾಯಧನ ಮಂಜೂರಾತಿಗೆ ಮನವಿ ಸಲ್ಲಿಸುವ ಸಂಸ್ಥೆಗಳಿಗೆ ಮಾನ್ಯತೆ ನೀಡಿ ಸಹಾಯಧನ ಮಂಜೂರು ಮಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ಜಿಲ್ಲೆಯಲ್ಲಿ ಇಂತಹ ಒಟ್ಟು 2 ಖಾಸಗಿ ಅನಾಥಾಲಯಗಳಿವೆ. ಮಾಹೆಯಾನ ಪ್ರತಿ ವಿದ್ಯಾರ್ಥಿಗೆ ರೂ. 800/– ರ ದರದಲ್ಲಿ ವರ್ಷದ 12 ತಿಂಗಳುಗಳಿಗೆ ಆಹಾರದ ಬಾಬ್ತು ಸಹಾಯಧನ ಮಂಜೂರು ಮಾಡಲಾಗುತ್ತದೆ.

2020-21ನೇ ಸಾಲಿನ ಮಾರ್ಚ್ 2021 ರ ಅಂತ್ಯದವರೆಗೆ ಸಾಧಿಸಿದ ಪ್ರಗತಿಯ ವಿವರ

ಕ್ರ. ಸಂ	ಚಾಲ್ತಿಯಲ್ಲಿರುವ ಯೋಜನೆ/ ಯೋಜನೇತರ ಕಾರ್ಯಕ್ರಮಗಳು	ಬಜೆಟ್‌ನಲ್ಲಿ ನಿಗದಿಪಡಿಸಲಾದ ಆಯವ್ಯಯ ವಿವರ	ಬಿಡುಗಡೆ ಮಾಡಲಾದ ಆಯವ್ಯಯ	ಭೌತಿಕ ಗುರಿ	ಭೌತಿಕ ಸಾಧನೆ	ಖರ್ಚು ಮಾಡಲಾದ ಮೊತ್ತ	ಶೇಕಡವಾರು ಸಾಧನೆ
1	*2*	*3*	*4*	*5*	*6*	*7*	*8*
	ಜಿಲ್ಲಾವಲಯ ಯೋಜನೆ (ಜಿ.ಪಂ ಕಾರ್ಯಕ್ರಮಗಳು)						
1.	ಹಿಂದುಳಿದ ವರ್ಗ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-103-0-26	2221.78	2153.36	4740 337	1805 181	2004.71	93.10%
2.	ಇತರ ಹಿಂದುಳಿದ ವರ್ಗದವರಿಗೆ ಇತರ ರಿಯಾಯತಿಗಳು 2225-00-103-0-28	1708.50	1708.50	18800	0	1708.50	100%
3.	ನಿರ್ದೇಶನ ಮತ್ತು ಆಡಳಿತ ಕಾರ್ಯನಿರ್ವಾಹಕ ಸಿಬ್ಬಂಧಿ 2225-00-103-0-39	49.70	64.89	16	8	61.07	94.11%
4.	ಕಟ್ಟಡಗಳ ವೆಚ್ಚ ಮತ್ತು ನಿರ್ವಹಣೆ 2225-00-103-0-40	63.83	63.83	21	21	63.83	100%
5.	ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ 2225-00-103-0-53	8.95	8.95	21	14	4.53	50.61%
6.	ದೇವರಾಜ ಅರಸು ಜನ್ಮದಿನಾಚರಣೆ 2225-00-103-0-56	1.00	1.00	5	5	1.00	100%
7.	ವಕೀಲರಿಗೆ ಪ್ರೋತ್ಸಾಹಧನ 2225-00-103-0-58	19.20	19.20	40	31	17.68	92.08%
	ಒಟ್ಟು	**4072.96**	**4019.73**	**23980**	**2065**	**3861.32**	**94.80%**

ಕ್ರ. ಸಂ	ಚಾಲ್ತಿಯಲ್ಲಿರುವ ಯೋಜನೆ/ ಯೋಜನೇತರ ಕಾರ್ಯಕ್ರಮಗಳು	ಬಜೆಟ್‌ನಲ್ಲಿ ನಿಗದಿಪಡಿಸಲಾದ ಆಯವ್ಯಯ ವಿವರ	ಬಿಡುಗಡೆ ಮಾಡಲಾದ ಆಯವ್ಯಯ	ಭೌತಿಕ ಗುರಿ	ಭೌತಿಕ ಸಾಧನೆ	ಖರ್ಚು ಮಾಡಲಾದ ಮೊತ್ತ	ಶೇಕಡವಾರು ಸಾಧನೆ
1	*2*	*3*	*4*	*5*	*6*	*7*	*8*
	ಜಿಲ್ಲಾವಲಯ ಯೋಜನೆ (ತಾ.ಪಂ ಕಾರ್ಯಕ್ರಮಗಳು)						
1	ಅನಾಥಾಲಯಗಳಿಗೆ ಸಹಾಯಧನ 2225-00-103-0-73	28.99	28.99	146	4	0.60	2.07%
2	ಹಿಂದುಳಿದ ವರ್ಗಗಳ ತಾಲೂಕು ವಿಸ್ತರಣಾ ಕಛೇರಿಗಳು 2225-00-103-0-74	15.97	15.26	6	6	14.99	98.23%
3	ಹೊಲಿಗೆ ತರಬೇತಿ ಕೇಂದ್ರಗಳು 2225-00-103-0-78	2.59	6.44	1	1	4.38	68.01%
	ಒಟ್ಟು	**47.55**	**50.69**	**153**	**11**	**19.97**	**39.40%**
	ಒಟ್ಟು ಮೊತ್ತ (ಜಿ.ಪಂ + ತಾ.ಪಂ)	**4120.51**	**4070.42**	**24133**	**2076**	**3881.29**	**95.35%**

****

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ

ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತರ ಜನಸಂಖ್ಯೆಯು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ 15.69 ರಷ್ಟಿರುತ್ತದೆ. ಅಲ್ಪಸಂಖ್ಯಾತರನ್ನು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸಬಲೀಕರಿಸುವ ಸಲುವಾಗಿ ಹಾಗೂ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗವು 1994 ರಲ್ಲಿ, ಅಭಿವೃದ್ಧಿಯ ದ್ರಷ್ಟಿಯಿಂದ ಕರ್ನಾಟಕ ಅಲ್ಪಸಂಖ್ಯಾತರ ನಿಗಮವು 1986ರಿಂದಲೂ ಕಾರ್ಯನಿರ್ವಹಿಸುತ್ತಿದ್ದು, ಅಲ್ಪಸಂಖ್ಯಾತರ ಶೈಕ್ಷಣಿಕ ಹಾಗೂ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯ ಪ್ರತ್ಯೇಕವಾಗಿ ಅಸ್ಥತ್ವಕ್ಕೆ ಬಂದಿದ್ದು, 1999–2000ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದೆ. ಹಿಂದುಳಿದ ವರ್ಗಗಳ ಇಲಾಖೆಯಿಂದ ಅಲ್ಪಸಂಖ್ಯಾತರಿಗಾಗಿ ಜಾರಿಯಾಗುತ್ತಿದ್ದ ಕಾರ್ಯಕ್ರಮಗಳನ್ನು ಈ ಇಲಾಖೆಗೆ ವರ್ಗಾಯಿಸಿದ್ದು ಅವುಗಳನ್ನು ಹೆಚ್ಚು ಒತ್ತು ನೀಡಿ ಜಾರಿಮಾಡುವುದಕ್ಕಾಗಿಯೇ ಅಲ್ಪಸಂಖ್ಯಾತರ ಇಲಾಖೆಯು 1999–2000 ನೇ ಸಾಲಿನಿಂದ ಅಸ್ತಿತ್ವಕ್ಕೆ ಬಂದಿರುತ್ತದೆ.

ಕಾರ್ಯಕ್ರಮಗಳು:

ದಕ್ಷಿಣ ಕನ್ನಡ ಜಿಲ್ಲೆ ಅಲ್ಪಸಂಖ್ಯಾತರ ಕಲ್ಯಾಣ ವತಿಯಿಂದ 7 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ, 3 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, 9 ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳು, 10 ಖಾಸಗಿ ಅನುದಾನಿತ ಅನಾಥಾಲಯಗಳು ಕಾರ್ಯನಿರ್ವಹಿಸುತ್ತಿವೆ. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ 525 ಮಂಜೂರಾತಿ ಸಂಖ್ಯೆಯಲ್ಲಿ 425 ಮಕ್ಕಳು, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ 660 ಮಂಜೂರಾತಿ ಸಂಖ್ಯೆಯಲ್ಲಿ 352 ಮಕ್ಕಳು, ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ 682 ಮಂಜೂರಾತಿ ಸಂಖ್ಯೆಯಲ್ಲಿ 471 ಮಕ್ಕಳು ಹಾಗೂ ಖಾಸಗಿ ಅನುದಾನಿತ ಅನಾಥಾಲಯಗಳಲ್ಲಿ 1048 ಮಂಜೂರಾತಿ ಸಂಖ್ಯೆಯಲ್ಲಿ 59 ಮಕ್ಕಳು ವಿದ್ಯಾಬ್ಯಾಸ ಪಡೆಯುತ್ತಿದ್ದಾರೆ.

1. ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು:

ಮೆಟ್ರಿಕ್ ನಂತರದ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮಾಸಿಕ ರೂ. 1600/–ರ ದರದಲ್ಲಿ ಊಟ, ವಸತಿ ಹಾಗೂ ಉಚಿತ ಗ್ರಂಥಾಲಯ ಸೌಕರ್ಯವನ್ನು ಕಲ್ಪಿಸಲಾಗುತ್ತಿದೆ. ನಿಲಯದ ನಿರ್ವಹಣೆ ಹಾಗೂ ಬೋಜನಾ ವೆಚ್ಚ ಸೇರಿ ರೂ 80.34 ಲಕ್ಷ ಹೊರಗುತ್ತಿಗೆ ಸಿಬ್ಬಂದಿ ವೇತನಕ್ಕೆ ರೂ. 41.39 ಲಕ್ಷ ಹಾಗೂ 2 ಖಾಯಂ ಸಿಬ್ಬಂದಿಗೆ ವೇತನ ಸಲುವಾಗಿ ರೂ 6.38 ಲಕ್ಷ ವೆಚ್ಚ ಮಾಡಲಾಗಿದೆ. 4 ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಬೋಜನಾ ವೆಚ್ಚ ಮಾಹೆಯಾನ ರೂ. 800/–ರಂತೆ ಒಟ್ಟು 2.52 ಲಕ್ಷ ವೆಚ್ಚ ಮಾಡಲಾಗಿದೆ.

2. ಕಾನೂನು ಪದವೀಧರರಿಗೆ ತರಬೇತಿ:

ಈ ಯೋಜನೆಯಡಿ ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ನೋಂದಾಯಿತರಾದ ಕಾನೂನು ಪದವೀಧರರಾಗಿದ್ದು, ಕುಟುಂಬದ ವಾರ್ಷಿಕ ಆದಾಯವು ರೂ.3.50 ಲಕ್ಷ ವನ್ನು ಮೀರಿರಬಾರದು. 30 ವರ್ಷ ವಯೊಮಿತಿಯೊಳಗಿವನವರಾಗಿದ್ದು, ಅಂತಿಮ ಕಾನೂನು ಪದವಿಯನ್ನು ಪೂರ್ಣಗೊಳಿಸಿ ಮೂರು ವರ್ಷ ಮೀರಿರಬಾರದು. ಇವರುಗಳಿಗೆ 20 ವರ್ಷಗಳಿಗಿಂತ ಹೆಚ್ಚಿನ ಅನುಭವವುಳ್ಳ ವಕೀಲರಿಂದ ತರಬೇತಿಪಡಿಸುವ ಕಾರ್ಯಕ್ರಮವಾಗಿರುತ್ತದೆ. ಪ್ರತಿ ವರ್ಷ ಗರಿಷ್ಟ 20 ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಈ ಬಾಬ್ತು 2020–21 ನೇ ಸಾಲಿನಲ್ಲಿ ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ.5000/– ರಂತೆ 14 ಅಭ್ಯರ್ಥಿಗಳಿಗೆ 2.55 ಲಕ್ಷ ಖರ್ಚು ಮಾಡಲಾಗಿದೆ.

3. ಜಿಲ್ಲಾ ಕಛೇರಿಗಳ ಕಾರ್ಯನಿರ್ವಾಹಕ ಸಿಬ್ಬಂದಿ ವೇತನ, ಕಛೇರಿ ವೆಚ್ಚ ಇತ್ಯಾದಿ:

ಇಲಾಖಾ ಜಿಲ್ಲಾ ಕಛೇರಿಗಳ ಮೂಲಕ ಈ ಇಲಾಖೆಯ ಎಲ್ಲಾ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುತ್ತದೆ. ಈ ಜಿಲ್ಲಾ ಕಛೇರಿಯ ಆಡಳಿತ ಮತ್ತು ನಿರ್ವಹಣೆಯನ್ನು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳು ಹಾಗೂ ಸಿಬ್ಬಂದಿಯ ಮೂಲಕ ನಿರ್ವಹಿಸಲಾಗುತ್ತಿದೆ. ಬಾಬ್ತು 2020–21 ನೇ ಸಾಲಿನಲ್ಲಿ ರೂ.8.56 ಲಕ್ಷ ವೇತನ ರೂ. 6.67 ಲಕ್ಷ ಹೊರಗುತ್ತಿಗೆ ವೇತನ ಹಾಗೂ ರೂ.8.00 ಲಕ್ಷ ವೇತನೇತರ ಒಟ್ಟು ರೂ.23.23 ಲಕ್ಷ ಖರ್ಚು ಮಾಡಲಾಗಿದೆ.

4. ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಸರಕಾರದ ಮಾನ್ಯತೆ ಪಡೆದ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯ/ ಅನುದಾನಿತ ಅನಾಥಾಲಯ ಗಳಿಗೆ ಸಹಾಯಧನ:

ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತರ ಜನಾಂಗದ ವಿದ್ಯಾರ್ಥಿಗಳು ಮಾಧ್ಯಮಿಕ ಹಾಗೂ ಪ್ರೌಢಶಾಲೆ ಹಂತದಲ್ಲಿ ವ್ಯಾಸಂಗ ಕಡಿತಗೊಳಿಸದೆ ಮುಂದುವರೆಸುವಂತೆ ಸಹಕಾರಿಯಾಗುವ ದೃಷ್ಟಿಯಿಂದ ಅಲ್ಪಸಂಖ್ಯಾತರು ನಡೆಸುತ್ತಿರುವ ಹಾಲಿ 5 ಮತೀಯ ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಅನುದಾನ ನೀಡಲಾಗುತ್ತದೆ. ಮಾಹೆಯಾನ ಪ್ರತಿ ವಿದ್ಯಾರ್ಥಿಗೆ ರೂ. 800/– ರ ದರದಲ್ಲಿ ವರ್ಷದ 10 ತಿಂಗಳುಗಳಿಗೆ ಬೋಜನಾವೆಚ್ಚ ಬಾಬ್ತು ಸಹಾಯಧನ ಮಂಜೂರು ಮಾಡಲಾಗುತ್ತದೆ.

ಅನಾಥ ಮತ್ತು ನಿರ್ಗತಿಕ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಅನಾಥಾಲಯಗಳನ್ನು ನಡೆಸುತ್ತಿವೆ. ಈ ಅನಾಥಾಲಯಗಳಲ್ಲಿ ಮಕ್ಕಳನ್ನು ಅವರ ಪ್ರೌಢ ಶಾಲಾ ಶಿಕ್ಷಣ ಮುಗಿಯುವವರೆಗೆ ಪೋಷಿಸಲು ಅವಕಾಶ ಕಲ್ಪಿಸಲಾಗುತ್ತದೆ. ಜಿಲ್ಲೆಯಲ್ಲಿ ಇಂತಹ ಒಟ್ಟು 10 ಖಾಸಗಿ ಅನಾಥಾಲಯಗಳಿವೆ. ಮಾಹೆಯಾನ ಪ್ರತಿ ವಿದ್ಯಾರ್ಥಿಗೆ ರೂ. 800/– ರ ದರದಲ್ಲಿ ವರ್ಷದ 12 ತಿಂಗಳುಗಳಿಗೆ ಬೋಜನಾವೆಚ್ಚ ಬಾಬ್ತು ಸಹಾಯಧನ ಮಂಜೂರು ಮಾಡಲಾಗುತ್ತದೆ. ಈ ಬಾಬ್ತು 2020–21 ನೇ ಸಾಲಿನಲ್ಲಿ 51.73 ಲಕ್ಷ ಖರ್ಚು ಮಾಡಲಾಗಿದೆ.

2020–21 ನೇ ಸಾಲಿನ ಮಾರ್ಚ್ 2021 ರ ಅಂತ್ಯದವರೆಗೆ ಸಾಧಿಸಿದ ಪ್ರಗತಿಯ ವಿವರ

ಕ್ರ. ಸಂ	ಚಾಲ್ತಿಯಲ್ಲಿರುವ ಯೋಜನೆ/ ಯೋಜನೇತರ ಕಾರ್ಯಕ್ರಮಗಳು	ಬಜೆಟ್‌ನಲ್ಲಿ ನಿಗದಿಪಡಿಸಲಾದ ಆಯವ್ಯಯ ವಿವರ	ಬಿಡುಗಡೆ ಮಾಡಲಾದ ಆಯವ್ಯಯ	ಭೌತಿಕ ಗುರಿ	ಭೌತಿಕ ಸಾಧನೆ	ಖರ್ಚು ಮಾಡಲಾದ ಮೊತ್ತ	ಶೇಕಡವಾರು ಸಾಧನೆ
1	*2*	*3*	*4*	*5*	*6*	*7*	*8*
			ಜಿಲ್ಲಾವಲಯ (ಜಿ.ಪಂ ಕಾರ್ಯಕ್ರಮಗಳು)				
1	ಅಲ್ಪಸಂಖ್ಯಾತರಿಗಾಗಿ ತರಬೇತಿ (ಕಾನೂನು ಪದವೀಧರರಿಗೆ ಶಿಷ್ಯವೇತನ)2225-00-103-0-44	2.55	2.55	20	14	2.55	100%
2	ಅಲ್ಪಸಂಖ್ಯಾತರಿಗಾಗಿ ಮೆ.ಪೂರ್ವ /ಮೆ.ನಂತರದ ಹಾಸ್ಟೆಲ್‌ಗಳು 2225-00-103-0-34(090)	127.94	127.94	725	555	80.34	62.79%
	ಸಿಬ್ಬಂದಿ ವೇತನ (001)	6.41	6.41	7	2	6.38	99.53%
	ಹೊ.ಗು ಸಿಬ್ಬಂದಿ ವೇತನ (034)	68.66	68.66	7	7	41.39	69.02%
3	ಕಛೇರಿ ನಿರ್ವಹಣೆ 2225-00-103-0-51(090)	8.00	8.00	1	1	8.00	100%
	ಸಿಬ್ಬಂದಿ ವೇತನ 2225-00-103-0-51(001)	8.63	8.63	8	2	8.56	99.18%
	ಹೊ.ಗು ಸಿಬ್ಬಂದಿ ವೇತನ (034)	7.18	7.18	4	4	6.67	92.89%
4	ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿನಿಲಯಗಳು ಅನಾಥಾಲಯಗಳು 2225-00-103-0-49	91.39	91.39	15	15	51.73	56.60%
	ಒಟ್ಟು	**320.76**	**320.76**	**787**	**600**	**205.62**	**64.10%**

2020–21 ನೇ ಸಾಲಿನ ಮಾರ್ಚ್ 2021ರ ಅಂತ್ಯದವರೆಗೆ ಸಾಧಿಸಿದ ಪ್ರಗತಿಯ ವಿವರ

ಘೋಷ್ವಾರೆ

ಕ್ರ. ಸಂ	ಚಾಲ್ತಿಯಲ್ಲಿರುವ ಯೋಜನೆ/ ಯೋಜನೇತರ ಕಾರ್ಯಕ್ರಮಗಳು	ಬಜೆಟ್‌ನಲ್ಲಿ ನಿಗದಿಪಡಿಸಲಾದ ಆಯವ್ಯಯ ವಿವರ	ಬಿಡುಗಡೆ ಮಾಡಲಾದ ಆಯವ್ಯಯ	ಭೌತಿಕ ಗುರಿ	ಭೌತಿಕ ಸಾಧನೆ	ಖರ್ಚು ಮಾಡಲಾದ ಮೊತ್ತ	ಶೇಕಡವಾರು ಸಾಧನೆ
1	*2*	*3*	*4*	*5*	*6*	*7*	*8*
1	ಜಿಲ್ಲಾವಲಯ	320.76	320.76	787	600	205.62	64.10%
	ಒಟ್ಟು	320.76	320.76	787	600	205.62	64.10%

****

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

1. ಅಂಗನವಾಡಿ ಕಟ್ಟಡಗಳ ನಿರ್ವಹಣೆ:

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2020–21ನೇ ಸಾಲಿನಲ್ಲಿ ರೂ. 122.25 ಲಕ್ಷ ಖರ್ಚು ಮಾಡಿ 224 ಅಂಗನವಾಡಿ ಕೇಂದ್ರಗಳ ಕಟ್ಟಡಗಳನ್ನು ದುರಸ್ತಿ ಮಾಡಲಾಗಿದೆ.

2. ಪೂರಕ ಪೌಷ್ಟಿಕ ಆಹಾರ ವಿತರಣಾ ಕಾರ್ಯಕ್ರಮ:

ಸದ್ರಿ ಕಾರ್ಯಕ್ರಮದನ್ವಯ 2020–21ನೇ ಸಾಲಿನಲ್ಲಿ 2,088 ಅಂಗನವಾಡಿ ಕೇಂದ್ರಗಳು ಹಾಗೂ 20 ಮಿನಿ ಅಂಗನವಾಡಿ ಕೇಂದ್ರಗಳ ಮೂಲಕ 6 ವರ್ಷದೊಳಗಿನ ಮಕ್ಕಳು ಹಾಗೂ ಗರ್ಭಿಣಿ, ಬಾಣಂತಿಯರಿಗೆ ಒಟ್ಟು 1,83,832 ಮಂದಿ ಫಲಾನುಭವಿಗಳಿಗೆ ಪೌಷ್ಟಿಕ ಆಹಾರ ವಿತರಿಸಲಾಗಿದ್ದು, ಈ ಬಗ್ಗೆ ಒಟ್ಟು ರೂ.7,129.50 ಲಕ್ಷಗಳನ್ನು ವ್ಯಯಿಸಲಾಗಿದೆ.

3. ನಿರಾಧಾರ ಮತ್ತು ಅನಾಥ ಮಕ್ಕಳ ರಕ್ಷಣೆ ಮತ್ತು ಪೋಷಣೆ:

ಸದ್ರಿ ಕಾರ್ಯಕ್ರಮದಡಿ ಜಿಲ್ಲೆಯ 12 ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ 20 ನಿರ್ಗತಿಕ ಕುಟೀರಗಳ ಅನಾಥ ಮತ್ತು ನಿರ್ಗತಿಕ ಮಕ್ಕಳ ರಕ್ಷಣೆ ಹಾಗೂ ಪೋಷಣೆಗಾಗಿ ಒಟ್ಟು ರೂ. 7.20 ಲಕ್ಷ ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವ್ಯಯಿಸಲಾಗಿದೆ.

4. ಭಾಗ್ಯಲಕ್ಷ್ಮಿ ಯೋಜನೆ:

ಭಾಗ್ಯಲಕ್ಷ್ಮಿ ಯೋಜನೆಯಡಿ ಒಟ್ಟು 4381 ಒಂದನೇ ಫಲಾನುಭವಿಗಳಿಗೆ, 699 ಎರಡನೇ ಫಲಾನುಭವಿಗಳಿಗೆ ಮಂಜೂರಾತಿ ನೀಡಲಾಗಿದೆ. 152.40 ಲಕ್ಷ ಅಂಚೆ ಕಛೇರಿಯ ಸುಕನ್ಯ ಸಮೃದ್ಧಿ ಯೋಜನೆಯಲ್ಲಿ ತೊಡಗಿಸಲಾಗಿದೆ.

5. ಅಂಗವಿಕಲರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಹಾಗೂ ವೃದ್ಧಾಶ್ರಮಗಳಿಗೆ ಧನ ಸಹಾಯ ನೀಡುವ ಕಾರ್ಯಕ್ರಮ:

2020–21ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಬುದ್ಧಿಮಾಂದ್ಯ ಮಕ್ಕಳಿಗೆ ವಿಶೇಷ ಶಾಲೆಯನ್ನು ನಡೆಸುತ್ತಿರುವ ಸೈಂಟ್ ಆಗ್ನೆಸ್ ವಿಶೇಷ ಶಾಲೆ ಬೆಂದೂರ್ ವೆಲ್, ಮಂಗಳೂರು ಮತ್ತು ಗಿಲ್ಡ್ ಆಫ್ ಸರ್ವಿಸ್ ವಾಕ್ ಮತ್ತು ಶ್ರವಣ ಕೇಂದ್ರ ಪಾಂಡೇಶ್ವರ ಮಂಗಳೂರು ಸಂಸ್ಥೆಗಳಿಗೆ ವೇತನ ಅನುದಾನ ಬಾಬ್ತು ರೂ. 97.23 ಲಕ್ಷ ಅನುದಾನ ಪಾವತಿಸಲಾಗಿದೆ. ಹಾಗೂ ವೃದ್ಧಾಶ್ರಮವನ್ನು ನಡೆಸುತ್ತಿರುವ ಅಭಯ ಆಶ್ರಯ ಕೊಣಾಜೆ, ಅಸೈಗೋಳಿ, ಮಂಗಳೂರು ಸ್ವಯಂ ಸೇವಾ ಸಂಸ್ಥೆಗೆ ರೂ.8.00 ಲಕ್ಷ ನಿರ್ವಹಣಾ ಅನುದಾನವನ್ನು ಪಾವತಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿನ ಸಿಬ್ಬಂದಿಗಳ ಮಾಹಿತಿ

ಹುದ್ದೆ	ಹುದ್ದೆಗಳ ವಿವರ		
	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಹುದ್ದೆಗಳು
ಉಪನಿರ್ದೇಶಕರು	1	1	0
ನಿರೂಪಣಾಧಿಕಾರಿಗಳು	1	1	0
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ	1	0	1
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ	1	1	ಬಾಹ್ಯಮೂಲ
ಅಧೀಕ್ಷಕರು(ಬಾಲಕರ ಬಾಲಮಂದಿರ)	1	0	1
ಸಂರಕ್ಷಣಾಧಿಕಾರಿ(ಕೌದೌತಕಾ)	2	1	1
ಪರಿವೀಕ್ಷಣಾಧಿಕಾರಿ	3	2	1
ಶಿಶು ಅಭಿವೃದ್ಧಿ ಯೋಜನಾಧಿಕಾರಿ	7	3	4
ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ	11	6	5
ಕಛೇರಿ ಅಧೀಕ್ಷಕರು	3	3	0
ಮೇಲ್ವಿಚಾರಕರು	83	75	8
ಪ್ರ.ದ.ಸ.	33	7	26
ದ್ವಿ.ದ.ಸ.	9	1	8
ಗೃಹಮಾತೆ	1	1	0
ಬೆರಳಚ್ಚುಗಾರರು/ಶೀಘ್ರ ಲಿಪಿಗಾರರು	4	0	4
ಚಾಲಕರು/ಹಿರಿಯ ವಾಹನ ಚಾಲಕರು	12	6	6
ಜವಾನರು/ಸ್ವಚ್ಛತೆಗಾರರು/ಅಡುಗೆಯವರು/ರಕ್ಷಕರು	28	2	26
ಒಟ್ಟು	**201**	**110**	**91**

2020–21ನೇ ಸಾಲಿನ ಆರ್ಥಿಕ ಹಾಗೂ ಭೌತಿಕ ಸಾಧನೆ ವಿವರ:

(ರೂ. ಲಕ್ಷಗಳಲ್ಲಿ)

ಲೆಕ್ಕಶೀರ್ಷಿಕೆ/ ಕಾರ್ಯಕ್ರಮ	ವಾರ್ಷಿಕ ಆರ್ಥಿಕ ಗುರಿ	ವಾರ್ಷಿಕ ಭೌತಿಕ ಗುರಿ	ಅನುದಾನ ಬಿಡುಗಡೆ	ಸಾಧನೆ		ಉಳಿಕೆ	ಷರಾ
				ಆರ್ಥಿಕ	ಭೌತಿಕ		
ಯೋಜನೆ (ಜಿಲ್ಲಾ ಪಂಚಾಯತ್ ಕಾರ್ಯಕ್ರಮ)							
2211–02–102–0–02 ಸಮಗ್ರ ಶಿಶು ಅಭಿವೃದ್ಧಿ ಯೋಜನೆ(ಜಿಲ್ಲಾ ಕೋಶ)	39.33	9	39.32	29.14	3	10.18	
ಯೋಜನೇತರ (ಜಿಲ್ಲಾ ಪಂಚಾಯತ್ ಕಾರ್ಯಕ್ರಮ)							
2211–00–102–0–26 ನಿರ್ಗತಿಕ ಕುಟೀರಗಳು	46.87	24	46.87	7.20	20	39.67	
2235–00–101–0–27 ಸಿಬ್ಬಂದಿ ಮತ್ತು ಆಡಳಿತ	58.26	9	57.61	53.56	4	4.05	
2235–00–101–0–28 ಅಂಗವಿಕಲರಿಗಾಗಿ ಇರುವ ಸಂಸ್ಥೆಗಳಿಗೆ ಸಹಾಯ ಧನ	84.00	2	97.23	97.23	2	0.00	
2235–00–101–0–30 ವೃದ್ಧರು, ವಿಕಲಾಂಗರು ಮತು ರೋಗಗ್ರಸ್ಥರು ಪಾಲನೆ ಗಾಗಿ ಇರುವ ಸ್ವಯಂ ಸಂಸ್ಥೆಗಳಿಗೆ ಅನುದಾನ	8.00	1	8.00	8.00	1	0.00	
ಯೋಜನೆ (ತಾಲೂಕು ಪಂಚಾಯತ್ ಕಾರ್ಯಕ್ರಮ)							
2211–02–102–0–22 ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಾಗಿ ಕೇಂದ್ರ ಪುರಸ್ಕೃತ ಯೋಜನೆ	5096.79	4361	5938.18	4854.82	4233	1083.36	2014–15 ರಿಂದ 2018–19 ಸಾಲಿನ ಉಳಿಕೆ ಅನುದಾನ ಹೆಚ್ಚುವರಿ ಬಿಡುಗಡೆಯಾಗಿದ್ದು, ಈ ಮೊತ್ತದಲ್ಲಿ ಉಳಿಕೆಯಾಗಿರುತ್ತದೆ
2211–00–102–0–61 ಅಂಗನವಾಡಿ ಕಟ್ಟಡಗಳ ನಿರ್ವಹಣೆ	125.00	250	125.00	122.25	224	2.75	
ಶಾಲಾ ಪೂರ್ವ ಮಕ್ಕಳಿಗೆ ಆಹಾರ ಕಾರ್ಯಕ್ರಮ							

2235–00–101–0–61 (090)	4768.00	116683	7813.40	6382.84	166214	1430.56	2014–15 ರಿಂದ 2018–19 ಸಾಲಿನ ಉಳಿಕೆ ಅನುದಾನ ಹೆಚ್ಚುವರಿ ಬಿಡುಗಡೆಯಾಗಿದ್ದು, ಈ ಮೊತ್ತದಲ್ಲಿ ಉಳಿಕೆಯಾಗಿರುತ್ತದೆ
2235–00–101–0–61 (422)	419.00	9542	464.20	456.11	10750	8.09	
2235–00–101–0–61 (423)	265.00	6051	294.46	290.55	6868	3.91	
ಒಟ್ಟು	**5452.00**	**132276**	**8572.06**	**7129.50**	**183832**	**1442.56**	

****

ಕೃಷಿ ಇಲಾಖೆ

ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಬೆಳೆ ಬಗ್ಗೆ ಮಾಹಿತಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೋಬಳಿಗೊಂದರಂತೆ ಒಟ್ಟು 16 ರೈತ ಸಂಪರ್ಕ ಕೇಂದ್ರಗಳಿವೆ. ತಾಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಕಾರ್ಯ ನಿರ್ವಹಿಸುತ್ತಿದೆ. ರೈತರಿಗೆ/ ಸಿಬ್ಬಂದಿಗಳಿಗೆ ತರಬೇತಿಯನ್ನು ಬೆಳ್ತಂಗಡಿಯಲ್ಲಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ನೀಡಲಾಗುತ್ತಿದೆ. ಮಂಗಳೂರಿನಲ್ಲಿ ರೈತರ ಕ್ಷೇತ್ರದ ಮಣ್ಣು ಪರೀಕ್ಷಿಸಲು ಮಣ್ಣು ಆರೋಗ್ಯ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ. ಬೆಳ್ತಂಗಡಿಯಲ್ಲಿ ರಸಗೊಬ್ಬರ ಮಾದರಿ ವಿಶ್ಲೇಷಣೆಗಾಗಿ ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯ ಕಾರ್ಯ ನಿರ್ವಹಿಸುತ್ತಿದೆ.

ಜಿಲ್ಲೆಯಲ್ಲಿ 2019–20 ಮತ್ತು 2020–21 ರ ಬೆಳೆಯ ವಿಸ್ತೀರ್ಣ ಪ್ರಗತಿಯು ಕೆಳಗಿನಂತಿರುತ್ತದೆ.

ಕ್ರ ಸಂ	ಬೆಳೆ	2019–20ನೇ ಸಾಲಿನ ಸಾಧನೆ (ಹೆಕ್ಟೇರುಗಳಲ್ಲಿ)				2020–21ನೇ ಸಾಲಿನ ಸಾಧನೆ (ಹೆಕ್ಟೇರುಗಳಲ್ಲಿ)			
		ಮುಂಗಾರು	ಹಿಂಗಾರು	ಬೇಸಿಗೆ	ಒಟ್ಟು	ಮುಂಗಾರು	ಹಿಂಗಾರು	ಬೇಸಿಗೆ	ಒಟ್ಟು
1.	ಭತ್ತ	10411	2486	–	12897	11247.5	3880	–	15,127.50
2.	ಉದ್ದು	–	67	–	67	–	52	–	52
3.	ಹೆಸರು	–	14.50	–	14.50	–	15.50	–	15.50
4.	ಹುರುಳಿ	–	13.50	–	13.50	–	0	–	0
5.	ಅಲಸಂಡೆ	–	21	–	21	–	12.00	–	12.00
6.	ಎಳ್ಳು	–	0	–	–	–	0	–	0
7.	ಕಬ್ಬು/ಇತರೆ	–	0	–	–	–	0	–	0
	ಒಟ್ಟು	10411	**2602**	**–**	**13013**	11247.5	**3959.5**	**–**	**15,207**

ಇಲಾಖೆಯ ಚಟುವಟಿಕೆಗಳು :–

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ಉದ್ದೇಶಿಸಿದ್ದು, ಇದಕ್ಕಾಗಿ ಈ ಕೆಳಗಿನಂತೆ ಕಾರ್ಯಕ್ರಮ ಹಾಕಿಕೊಳ್ಳಲಾಗಿದ್ದು, ಪ್ರಗತಿಯಾಗಿದೆ.

1. ಜಿಲ್ಲೆಯಲ್ಲಿ ಭತ್ತದ ಬೆಳೆಯ ಪ್ರದೇಶವನ್ನು ಹೆಚ್ಚಿಸಲು ಕಷ್ಟಸಾಧ್ಯವಾಗಿರುವುದರಿಂದ ಎಲ್ಲಾ ರೈತರಿಗೂ ಅಧಿಕ ಇಳುವರಿ ತಳಿ ಬೆಳೆಯಲು ಮನವೊಲಿಸಲಾಗುತ್ತಿದೆ. 175 ಹೆಕ್ಟೇರು ಪ್ರದೇಶದಲ್ಲಿ ಮುಂಗಾರು ಹಂಗಾಮಿನಲ್ಲಿ ಕೇಂದ್ರ ವಲಯದ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಲ್ಲಿ ಯಾಂತ್ರೀಕೃತ ನಾಟಿ ಹಾಗೂ ಸಾಲು ನಾಟಿಯ ಮೂಲಕ ಭತ್ತ ಬೆಳೆಯಲು ರೈತರನ್ನು ಪ್ರೋತ್ಸಾಹಿಸುತ್ತಾ, ಉತ್ಪಾದನೆಗೆ ಬೇಕಾಗುವ ಕೃಷಿ ಪರಿಕರಗಳನ್ನು ಮಿನಿಕಿಟ್ ಮುಖಾಂತರ ವಿತರಿಸಿ ಜಿಲ್ಲೆಯ ಉತ್ಪಾದನೆ/ಉತ್ಪಾದಕತೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.

2. ಪ್ರಾತ್ಯಕ್ಷಿಕೆ ಮೂಲಕ/ತರಬೇತಿ ಮೂಲಕ ಹೆಚ್ಚು ಇಳುವರಿ ಪಡೆಯಲು ಪ್ರಯತ್ನಿಸಲಾಗುತ್ತಿದೆ. ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮುಂತಾದ ಯೋಜನೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

3. ಮಣ್ಣಿನ ಸತ್ವ ಹೆಚ್ಚಿಸುವಿಕೆ : ದಕ್ಷಿಣ ಕನ್ನಡ ಜಿಲ್ಲೆಯ ಮಣ್ಣು ಹುಳಿ ಮಣ್ಣಾಗಿದ್ದು ರಸಸಾರ ಮಟ್ಟ (pH) ಕಡಿಮೆ ಇದ್ದು, ಮಣ್ಣಿನ ಹುಳಿ ಅಂಶವನ್ನು ಹೋಗಲಾಡಿಸಿ ಮಣ್ಣನ್ನು ಕೃಷಿ ಯೋಗ್ಯವಾದ ಮಣ್ಣನ್ನಾಗಿಸಲು ಡೋಲೋಮೈಟ್, ಕೃಷಿ ಸುಣ್ಣ, ಹಸಿರೆಲೆ ಗೊಬ್ಬರದ ಬೀಜ, ಜೈವಿಕ ಗೊಬ್ಬರ, ಸಾವಯವ ಗೊಬ್ಬರ ಹಾಗೂ ಎರೆಹುಳು ಗೊಬ್ಬರಗಳನ್ನು 1187 ಹೆ. ಪ್ರದೇಶದ ರೈತರಿಗೆ ವಿತರಿಸಲಾಗಿದ್ದು, ರೂ. 21.87 ಲಕ್ಷ ವೆಚ್ಚ ಮಾಡಲಾಗಿದೆ

4. ಹಿಂಗಾರು ಬೇಸಿಗೆ ಹಂಗಾಮಿಗೆ ತುಂತುರು ನೀರಾವರಿ ಮುಂತಾದ ನೀರಾವರಿ ವ್ಯವಸ್ಥೆ ಅಳವಡಿಕೆ ಮೂಲಕ ದ್ವಿದಳಧಾನ್ಯ/ಎಣ್ಣೆಕಾಳು ಬೆಳೆಗಳ ವಿಸ್ತೀರ್ಣ/ ಉತ್ಪಾದನೆ ಹೆಚ್ಚಿಸಲಾಗುತ್ತಿದೆ. ಕೇಂದ್ರದ ಹಾಗೂ ರಾಜ್ಯ ವಲಯ ಸೇರಿ ಒಟ್ಟು ಶೇ. 90 ರಿಯಾಯಿತಿಯಲ್ಲಿ ಸವಲತ್ತು ನೀಡಲಾಗಿದೆ.

5. ಸಕಾಲದಲ್ಲಿ ರೈತರಿಗೆ ಉತ್ತಮ ಗುಣಮಟ್ಟದ ಬೀಜ, ಸಾವಯವ ಕೃಷಿ ಪರಿಕರ, ರಸಗೊಬ್ಬರ, ಸಸ್ಯಸಂರಕ್ಷಣಾ ಔಷಧಿ ಉಪಕರಣ ಪೂರೈಸಿ ತನ್ಮೂಲಕ ಹೆಚ್ಚಿನ ಉತ್ಪಾದನೆ ಪಡೆಯುವುದು. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಸಾವಯವ ಕೃಷಿ, ಸಾವಯವ ಭಾಗ್ಯ, ಸಸ್ಯಸಂರಕ್ಷಣಾ ಯೋಜನೆ ಮುಂತಾದ ಯೋಜನೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

6. ಜಿಲ್ಲಾ ಪಂಚಾಯತ್/ತಾಲೂಕು ಪಂಚಾಯತ್/ರಾಜ್ಯ ವಲಯ ಯೋಜನೆಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಲಾಗಿದೆ. 'ಆತ್ಮ' ಯೋಜನೆಯನ್ನು ಕೃಷಿಗೆ ಸಂಬಂಧಿಸಿದ ಇಲಾಖೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.

7. ಬೆಳೆ ವಿಮೆ ಪ್ರಚಾರ, ಕೃಷಿಯಲ್ಲಿ ಸ್ಪರ್ಧಾಮನೋಭಾವ ಬೆಳೆಸಲು ಕೃಷಿ ಪ್ರಶಸ್ತಿ, ಯುವಕರನ್ನು ಕೃಷಿಯತ್ತ ಆರಂಭಿಸಲು ಕ್ರಮ, ಮಾನವ ಸಂಪನ್ಮೂಲ ಅಭಿವೃದ್ಧಿ, ಮೂಲಭೂತ ಸೌಕರ್ಯ ಒದಗಣೆ ಇತ್ಯಾದಿ ಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

8. ಕೃಷಿ ಯಂತ್ರೋಪಕರಣಗಳ ವಿತರಣೆ : ಕೃಷಿ ಕಾರ್ಮಿಕರ ಕೊರತೆ ನೀಗಿಸಲು 16 ಫಲಾನುಭವಿಗಳಿಗೆ ಸಣ್ಣ ಟ್ರ್ಯಾಕ್ಟರ್, 26 ಫಲಾನುಭವಿಗಳಿಗೆ ಪವರ್ ಟಿಲ್ಲರ್, 363 ಫಲಾನುಭವಿಗಳಿಗೆ ಸ್ವಯಂ ಚಾಲಿತ ಉಪಕರಣಗಳು, 410 ಫಲಾನುಭವಿಗಳಿಗೆ ಟ್ರ್ಯಾಕ್ಟರ್/ ಪವರ್ ಟಿಲ್ಲರ್/ ಇಂಜಿನ್/ ಮೋಟಾರ್ ಚಾಲಿತ ಉಪಕರಣಗಳು, 29 ಫಲಾನುಭವಿಗಳಿಗೆ ಸಸ್ಯ ಸಂರಕ್ಷಣಾ ಉಪಕರಣಗಳನ್ನು ವಿತರಿಸಲಾಗಿದೆ. ಹಾಗೂ 4 ಕೃಷಿ ಯಂತ್ರೋಪಕರಣಗಳ ಬ್ಯಾಂಕನ್ನು ಗ್ರಾಮ ಮಟ್ಟದಲ್ಲಿ ಸ್ಥಾಪಿಸಲಾಗಿದೆ.

9. ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ : ಕಟಾವಿನ ನಂತರ ಕೃಷಿ ಉತ್ಪನ್ನಗಳನ್ನು ಮಳೆ, ಗಾಳಿ ಹಾಗೂ ಇತರೆ ಹವಾಮಾನ ವೈಪರೀತ್ಯಗಳಿಂದ ಸಂರಕ್ಷಿಸಲು ಹಾಗೂ ಒಕ್ಕಣೆ ಮಾಡಲು ಅನುಕೂಲವಾಗುವಂತೆ 11,311 ಫಲಾನುಭವಿಗಳಿಗೆ ಟಾರ್ಪಲಿನ್‌ಗಳನ್ನು ಸಹಾಯಧನದಲ್ಲಿ ವಿತರಿಸಲಾಗಿದೆ.

10. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ : 2020–21ನೇ ಸಾಲಿನಲ್ಲಿ ಸಂದಿಗ್ಧ ಪರಿಸ್ಥಿತಿಯಲ್ಲಿ ನೀರನ್ನು ಒದಗಿಸಲು ಹಾಗೂ ನೀರಿನ ಮಿತ ಬಳಕೆಗಾಗಿ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಒಟ್ಟು 3736 ಸಂಖ್ಯೆಯ ತುಂತುರು ನೀರಾವರಿ ಘಟಕಗಳನ್ನು ಸಹಾಯಧನದಡಿ ವಿತರಿಸಲಾಗಿರುತ್ತದೆ.

ಜಿಲ್ಲೆಯಲ್ಲಿ ಎಲ್ಲಾ ಯೋಜನೆಯಡಿ ಕಾರ್ಯಕ್ರಮಗಳನ್ನು ಮಾರ್ಗಸೂಚಿ ಪ್ರಕಾರ ಅನುಷ್ಠಾನಗೊಳಿಸಲಾಗಿದ್ದು ಮಾರ್ಗಸೂಚಿಯನ್ನು ಅನುಸರಿಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಆಯ್ಕೆ ಮಾಡುವಾಗ ಶೇ.33 ರಷ್ಟು ಮಹಿಳಾ ರೈತರಿಗೆ ಆದ್ಯತೆ ನೀಡಲಾಗುತ್ತಿದೆ. ಶೇ.22ರಷ್ಟು ಪ.ಜಾತಿ/ಪ.ಪಂ. ರೈತರಿಗೆ ಮೀಸಲಿಡಲಾಗುತ್ತಿದೆ. ಶೇ.10 ರಿಂದ 15 ರಷ್ಟು ಅಲ್ಪಸಂಖ್ಯಾತ ರೈತರಿಗೆ ಹಾಗೂ ಶೇ.3 ರಷ್ಟು ಅಂಗವಿಕಲರಿಗೆ ಆದ್ಯತೆ ನೀಡಲಾಗುತ್ತಿದೆ.

2020–21 ನೇ ಸಾಲಿನಲ್ಲಿ ಕೃಷಿ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾಗಿರುವ ಜಿಲ್ಲಾ ಪಂಚಾಯತ್ ಯೋಜನೆಗಳ ವಿವರ:

1. ವಿಶೇಷ ಘಟಕ ಯೋಜನೆ/ ಗಿರಿಜನ ಉಪ ಯೋಜನೆ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಪರಿಶಿಷ್ಟ ಜಾತಿ ರೈತರ ಕ್ಷೇಮಾಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆ ಹಾಗೂ ಪರಿಶಿಷ್ಟ ಪಂಗಡದ ರೈತರ ಏಳಿಗೆಗಾಗಿ ಗಿರಿಜನ ಉಪ ಯೋಜನೆ ಎಂಬ ಯೋಜನೆಗಳನ್ನು ರೂಪಿಸಲಾಗಿದ್ದು, 23 ಪವರ್ ವೀಡರ್, 35 ಟ್ರಾಲಿ, 8 ಹಾರೆ, 6 ಪಿಕ್ಕಾಸು ಮುಂತಾದ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲಾಗಿದ್ದು, ರೂ.4.3592 ಲಕ್ಷ ವೆಚ್ಚ ಮಾಡಲಾಗಿದೆ.

2. ಕೃಷಿ ಕಟ್ಟಡ ವೆಚ್ಚಗಳು: ಈ ಯೋಜನೆಯಲ್ಲಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಕಟ್ಟಡ, ರೈತ ಸಂಪರ್ಕ ಕೇಂದ್ರ ಹಾಗೂ ವಸತಿ ಗೃಹಗಳ ದುರಸ್ತಿ ಕಾಮಗಾರಿಗಳ ರೂ.20.00 ಲಕ್ಷ ವೆಚ್ಚ ಮಾಡಲಾಗಿದೆ.

ಇಲಾಖೆಯಲ್ಲಿ ಮಂಜೂರಾದ ತಾಂತ್ರಿಕ ಮತ್ತು ಇತರೆ ಹುದ್ದೆಗಳ ಮಾಹಿತಿ

ಕ್ರಸಂ	ಹುದ್ದೆಯ ವಿವರ	ಮಂಜೂರು	ಭರ್ತಿ	ಖಾಲಿ	
1.	ಜಂಟಿ ಕೃಷಿ ನಿರ್ದೇಶಕರು	1	1	--	
2.	ಉಪ ಕೃಷಿ ನಿರ್ದೇಶಕರು	3	3	0	
3.	ಸಹಾಯಕ ಕೃಷಿ ನಿರ್ದೇಶಕರು	11	6	5	
4.	ಕೃಷಿ ಅಧಿಕಾರಿಗಳು	38	8	30	
5.	ಸಹಾಯಕ ಕೃಷಿ ಅಧಿಕಾರಿ	54	11	43	
6.	ಇತರೆ ಸಿಬ್ಬಂದಿ/ಅಧಿಕಾರಿ				
	1. ಆಡಳಿತ ಸಹಾಯಕರು	1	0	1	
	2. ಅಧೀಕ್ಷಕರು	10	6	4	
	3. ಪ್ರ.ದ.ಸ.	19	6	13	1ಪ್ರ.ದ.ಸ.ಹುದ್ದೆ IWMP ಗೆ ಸೇರಿರುವುದಾಗಿರುತ್ತದೆ.
	4. ದ್ವಿ.ದ.ಸ.	19	8	11	
	5. ಶೀಘ್ರಲಿಪಿಗಾರರು	1	1	0	
	6. ಕೃಷಿ ಉಪಕರಣಗಳ ಮೇಲ್ವಿಚಾರಕರು	0	0	0	ಸರ್ಕಾರಿ ಅಧಿಸೂಚನೆಯಂತೆ ಕೃ.ಉ.ಮೇ.ಹುದ್ದೆಯು ನಿವೃತ್ತಿಯ ನಂತರ ರದ್ದಾಗಿರುತ್ತದೆ.
	7. ಬೆರಳಚ್ಚುಗಾರರು	11	1	10	
	8. ವಾಹನ ಚಾಲಕ	11	1	10	
	9. ಪ್ರಯೋಗ ಶಾಲಾ ಸಹಾಯಕರು	2	1	1	
	10. ಪ್ರಯೋಗ ಶಾಲಾ ಪರಿಚಾರಕರು	3	0	3	
	11.ಬಾಣಸಿಗರು	1	0	1	
	12.ಡಿ–ವರ್ಗ	27	3	24	
	13.ರೇಖಾಗಾರರು	0	0	0	ಸರ್ಕಾರಿ ಅಧಿಸೂಚನೆಯಂತೆ ಕೃ.ಉ.ಮೇ.ಹುದ್ದೆಯು ನಿವೃತ್ತಿಯ ನಂತರ ರದ್ದಾಗಿರುತ್ತದೆ.
	14.ಹಿ.ಸ.ತೋ.ನಿ./ಸಅ.ಸಂ.	1	0	1	
	15.ವಲಯ ಅರಣ್ಯಾಧಿಕಾರಿ	1	1	0	
	16.ಸ.ತೋ.ಅಧಿಕಾರಿ	1	0	1	
	17.ತೋಟಗಾರಿಕಾ ಸಹಾಯಕರು	2	1	1	
	18.ಉಪವಲಯ ಅರಣ್ಯಾಧಿಕಾರಿ	2	0	2	
	ಒಟ್ಟು	**218**	**58**	**160**	

ಹೊರಗುತ್ತಿಗೆ ಸಿಬ್ಬಂದಿ	ಆತ್ಮ	17
	ರಾಜ್ಯವಲಯ	23
	ರೈತ ಸಂಪರ್ಕ ಕೇಂದ್ರದ ಸೇವಾ ನಿರತರು	16
	ಮಣ್ಣು ಆರೋಗ್ಯ ಕೇಂದ್ರದ ಸಿಬ್ಬಂದಿ	5

ತೋಟಗಾರಿಕಾ ಇಲಾಖೆ

ಜಿಲ್ಲೆಯು ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶವಾಗಿದ್ದು, ಉಷ್ಣ ವಾತಾವರಣ ಹೊಂದಿರುತ್ತದೆ. ಸರಾಸರಿ ವರ್ಷಕ್ಕೆ 3975 ಮಿ.ಮೀ ಮಳೆಯಾಗುತ್ತಿದ್ದು, ಸಾಕಷ್ಟು ಉಷ್ಣಾಂಶ ಮತ್ತು ತೇವಾಂಶ ಹೊಂದಿದ್ದು, ತೋಟಗಾರಿಕೆ ಬೆಳೆಗಳಿಗೆ ಪ್ರಶಸ್ತವಾಗಿದೆ. ಜಿಲ್ಲೆಯು ಕರಾವಳಿ ಪ್ರದೇಶ, ಒಳನಾಡು ಪ್ರದೇಶ ಹಾಗೂ ಪಶ್ಚಿಮ ಘಟ್ಟ ಪ್ರದೇಶವನ್ನು ಹೊಂದಿದೆ. ಮಂಗಳೂರು ತಾಲೂಕು ಕರಾವಳಿ ಪ್ರದೇಶವಾಗಿದ್ದು ಬಂಟ್ವಾಳ, ಪುತ್ತೂರು ಒಳನಾಡು ಪ್ರದೇಶವಾಗಿದೆ. ಸುಳ್ಯ, ಬೆಳ್ತಂಗಡಿ ಪಶ್ಚಿಮ ಘಟ್ಟ ಪ್ರದೇಶ ವ್ಯಾಪ್ತಿಯಲ್ಲಿ ಬರುತ್ತದೆ. ಕರಾವಳಿ ಮತ್ತು ಒಳನಾಡು ಪ್ರದೇಶದಲ್ಲಿ ಮರಳು ಮಿಶ್ರಿತ ಮಣ್ಣು ಮತ್ತು ಪಶ್ಚಿಮ ಘಟ್ಟ ಪ್ರದೇಶದಲ್ಲಿ ಕೆಂಪು ಕಲ್ಲಿನ ಮಣ್ಣು ಕಂಡುಬರುತ್ತದೆ.

ಜಿಲ್ಲೆಯಲ್ಲಿ ಒಟ್ಟು 173571.76 ಹೆಕ್ಟೇರ್ ಪ್ರದೇಶದಲ್ಲಿ ರೈತರು ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದು, ಇದರಲ್ಲಿ ತೋಟದ ಬೆಳೆಗಳು ಅತೀ ಹೆಚ್ಚು ಪ್ರದೇಶವನ್ನು ಆವರಿಸಿದೆ. ಸುಮಾರು 161299.63 ಹೆಕ್ಟೇರ್ ಪ್ರದೇಶದಲ್ಲಿ ತೋಟದ ಬೆಳೆಗಳು, 4982.45 ಹೆಕ್ಟೇರ್ ಪ್ರದೇಶದಲ್ಲಿ ಹಣ್ಣಿನ ಬೆಳೆಗಳು, 58.21 ಹೆಕ್ಟೇರ್‌ನಲ್ಲಿ ತರಕಾರಿ ಬೆಳೆಗಳು, 7210.84 ಹೆಕ್ಟೇರ್‌ನಲ್ಲಿ ಸಾಂಬಾರು ಬೆಳೆಗಳು ಮತ್ತು ಹೂವಿನ ಬೆಳೆಗಳು 24.05 ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತಿದೆ. ಮುಖ್ಯವಾಗಿ ಅಡಿಕೆ 93152.75 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದು, ರೈತರ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ತೆಂಗು 31994.67 ಹೆಕ್ಟೇರ್, ಗೇರು 14095.13 ಹೆಕ್ಟೇರ್, ಕೋಕೋ 3203.86 ಹೆಕ್ಟೇರ್, ಕಾಳುಮೆಣಸು 7149.37 ಹೆಕ್ಟೇರ್, ಬಾಳೆ 4454.96 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ಪ್ರತೀ ವರ್ಷ ಸುಮಾರು 461.29 ಟನ್ ತರಕಾರಿ, 110517.62 ಟನ್ ಹಣ್ಣುಗಳು, 171187.65 ಟನ್ ತೋಟದ ಬೆಳೆಗಳು ಹಾಗೂ 1837.80 ಟನ್ ಸಾಂಬಾರು ಪದಾರ್ಥಗಳ ಉತ್ಪಾದನೆಯಿದೆ. ಅಂದಾಜು 3753.95 ಲಕ್ಷ ತೆಂಗಿನ ಕಾಯಿಗಳ ಉತ್ಪಾದನೆಯಾಗುತ್ತಿದೆ. ಒಟ್ಟು ತೋಟಗಾರಿಕೆ ಬೆಳೆ ಪ್ರದೇಶದಲ್ಲಿ ಅಡಿಕೆ ಶೇ. 53.67, ತೆಂಗು ಶೇ. 18.43 ಮತ್ತು ಗೇರು ಶೇ.8.12 ರಷ್ಟಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಮೇಲ್ವಿಚಾರಣೆಯನ್ನು ತೋಟಗಾರಿಕೆ ಉಪನಿರ್ದೇಶಕರು ವಹಿಸಿದ್ದು, ಜಿಲ್ಲಾ ಪಂಚಾಯತ್ ಹಾಗೂ ರಾಜ್ಯವಲಯ ಕಛೇರಿಗಳು ಅವರ ವ್ಯಾಪ್ತಿಗೆ ಒಳಪಡುತ್ತದೆ.

ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆ ಎಂದೇ ಕರೆಯಬಹುದಾಗಿದ್ದು, ತೋಟಗಾರಿಕೆ ಪ್ರಗತಿಯಲ್ಲಿ ಇಲಾಖೆ ಮಹತ್ವದ ಪಾತ್ರ ವಹಿಸಿದೆ. ಉತ್ತಮ ಗಿಡಗಳ ಸರಬರಾಜು, ತಾಂತ್ರಿಕ ಮಾಹಿತಿಗಳೊಂದಿಗೆ ಸರಕಾರದ ವಿವಿಧ ಯೋಜನೆಗಳ ಮುಖಾಂತರ ರೈತರಿಗೆ ಇಲಾಖೆ ಸಹಾಯಹಸ್ತ ನೀಡಿದೆ.

2020–21ನೇ ಸಾಲಿನಲ್ಲಿ ಇಲಾಖೆಯು ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ 167.85 ಲಕ್ಷ ರೂ. ಗಳ ಕಾಮಗಾರಿಗಳನ್ನು ನಿರ್ವಹಿಸಿದ್ದು 60514 ಮಾನವ ದಿನಗಳ ಉದ್ಯೋಗ ಒದಗಿಸುವುದರೊಂದಿಗೆ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆಗೆ ಪ್ರೋತ್ಸಾಹ ನೀಡಿದೆ.

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಜಿಲ್ಲೆಯ ತೋಟಗಾರಿಕೆ ಉಪನಿರ್ದೇಶಕರ ಕಛೇರಿಯಲ್ಲಿ ಹಾಗೂ ಅಧೀನ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ವಿವರ ಈ ಕೆಳಗಿನಂತಿವೆ. (2021 ರ ಮಾರ್ಚ್ ಅಂತ್ಯಕ್ಕೆ)

ಕ್ರಮ ಸಂಖ್ಯೆ	ಹುದ್ದೆಗಳ ವಿವರ/ ಸಮೂಹ	ವೃಂದ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ	ಷರಾ
1	ತೋಟಗಾರಿಕೆ ಉಪನಿರ್ದೇಶಕರು	ಎ	1	1	0	
2	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	ಎ	5	5	0	
3	ಸಹಾಯಕ ತೋಟಗಾರಿಕೆ ನಿರ್ದೇಶಕರು	ಬಿ	9	4	5	
4	ಸಹಾಯಕ ತೋಟಗಾರಿಕೆ ಅಧಿಕಾರಿ	ಬಿ	22	8	14	
5	ಅಧೀಕ್ಷಕರು	ಸಿ	4	4	0	
6	ಸಹಾಯಕ ಸಾಂಖ್ಯಿಕ ಅಧಿಕಾರಿ	ಸಿ	1	0	1	
7	ಪ್ರಥಮ ದರ್ಜೆ ಸಹಾಯಕರು	ಸಿ	4	4	0	
8	ತೋಟಗಾರಿಕೆ ಸಹಾಯಕರು	ಸಿ	18	8	10	2 ಹುದ್ದೆ OODಮೇಲೆ ಬೇರೆ ಜಲ್ಲೆಗಳಿಗೆ ನಿಯೋಜನೆ ಹೊಂದಿರುತ್ತಾರೆ.
9	ದ್ವಿತೀಯ ದರ್ಜೆ ಸಹಾಯಕರು	ಸಿ	6	4	2	
10	ಬೆರಳಚ್ಚುಗಾರರು	ಸಿ	1	0	1	
11	ವಾಹನ ಚಾಲಕರು	ಸಿ	2	1	1	
12	ಜೇನು ಪ್ರದರ್ಶಕರು	ಸಿ	4	0	4	
13	ಅಟೆಂಡರ್	ಡಿ	1	1	0	
14	ಪ್ರಯೋಗ ಶಾಲೆ ಸಹಾಯಕರು	ಡಿ	2	0	2	2 Daily wage
15	ಕಛೇರಿ ಸೇವಕರು	ಡಿ	4	0	4	
16	ತೋಟಗಾರರು	ಡಿ	14	2	12	1 Daily wage
ಒಟ್ಟು			**98**	**42**	**56**	

ಕ್ಷೇತ್ರ ಮತ್ತು ನರ್ಸರಿ ಹಾಗೂ ಉದ್ಯಾನವನಗಳ ಉಸ್ತುವಾರಿಯನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ ರವರು ಮಾಡುತ್ತಿದ್ದು ಅವರ ಅಧೀನ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ಹುದ್ದೆಗಳ ವಿವರ/ ಸಮೂಹ	ವೃಂದ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	ಎ	1	1	0
2	ಸಹಾಯಕ ತೋಟಗಾರಿಕೆ ನಿರ್ದೇಶಕರು	ಬಿ	4	1	3
3	ಸಹಾಯಕ ತೋಟಗಾರಿಕೆ ಅಧಿಕಾರಿ	ಬಿ	5	0	5
4	ಪ್ರಥಮ ದರ್ಜೆ ಸಹಾಯಕರು	ಸಿ	1	1	0
5	ದ್ವಿತೀಯ ದರ್ಜೆ ಸಹಾಯಕರು	ಸಿ	1	1	0
6	ತೋಟಗಾರಿಕೆ ಸಹಾಯಕರು	ಸಿ	13	7	6
7	ಬೆರಳಚ್ಚುಗಾರರು	ಸಿ	1	0	1
8	ವಾಹನ ಚಾಲಕರು	ಸಿ	2	0	2
9	ಅಟೆಂಡರ್	ಡಿ	2	0	2
10	ತೋಟಗಾರರು	ಡಿ	48	6	42
ಒಟ್ಟು			**78**	**17**	**61**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕ್ಷೇತ್ರ ಸಸ್ಯಾಗಾರಗಳ ವಿವರ ಹಾಗೂ 2020–21 ನೇ ಸಾಲಿನಲ್ಲಿ ಉತ್ಪಾದಿಸಿದ ಕಸಿ/ಸಸಿಗಳ ವಿವರಗಳು ಈ ಕೆಳಗಿನಂತಿವೆ.

ಕ್ರಮ ಸಂಖ್ಯೆ	ಕ್ಷೇತ್ರ/ ಸಸ್ಯಾಗಾರದ ಹೆಸರು	ತಾಲೂಕು	ಒಟ್ಟು ವಿಸ್ತೀರ್ಣ (ಎಕರೆ ಗುಂಟೆಗಳಲ್ಲಿ)	ಅಭಿವೃದ್ಧಿ ಹೊಂದಿದ ಪ್ರದೇಶ (ಎಕರೆ ಗುಂಟೆಗಳಲ್ಲಿ)	ಅಭಿವೃದ್ಧಿ ಹೊಂದದ ಪ್ರದೇಶ (ಎಕರೆ ಗುಂಟೆಗಳಲ್ಲಿ)	ಉತ್ಪಾದಿಸಿದ ಕಸಿ/ಸಸಿಗಳ ವಿವರ
ರಾಜ್ಯವಲಯ						
1	ಜಿಲ್ಲಾ ಸಸ್ಯಾಗಾರ	ಮಂಗಳೂರು	1.27	1.27	0.00	ತರಕಾರಿ ಸಸಿ–5000ಸಂ.
2	ಪಡೀಲ್ ತೋಟಗಾರಿಕೆ ಕ್ಷೇತ್ರ	ಮಂಗಳೂರು	20.19	15.19	5.00	ಕಾಳುಮೆಣಸು–5000 ಪಾಲಿಬ್ಯಾಗ್
3	ಪಡೀಲ್ ವೃತ್ತ ಸಸ್ಯಾಗಾರ	ಮಂಗಳೂರು	3.00	0.14	2.26	–
4	ಹೊಸಗದ್ದೆ ತೋಟಗಾರಿಕೆ ಕ್ಷೇತ್ರ	ಸುಳ್ಯ	14.34	14.34	0.00	ಕೊಕ್ಕೋ –2000, ಕಾಳುಮೆಣಸು–10000 ಪಾಲಿಬ್ಯಾಗ್, ಗೇರು–5000, ಕಸಿಕಾಳುಮೆಣಸು –2000. ತರಕಾರಿ ಸಸಿ–5000ಸಂ.
5	ಕಬಕ ತೋಟಗಾರಿಕೆ ಕ್ಷೇತ್ರ,	ಪುತ್ತೂರು	3.21	3.21	0.00	ನುಗ್ಗೆ–1000, ಕಾಳುಮೆಣಸು 10000 ಪಾಲಿಬ್ಯಾಗ್, ಗೇರು–5000, ಅಡಿಕೆ–5000, ತರಕಾರಿ ಸಸಿ–5000ಸಂ.
6	ಮದ್ದಡ್ಕ ತೋಟಗಾರಿಕೆ ಕ್ಷೇತ್ರ	ಬೆಳ್ತಂಗಡಿ	105.19	105.19	0.00	ಕಾಳುಮೆಣಸು –25000 ಪಾಲಿಬ್ಯಾಗ್, ಗೇರು –10000, ಅಡಿಕೆ–5000, ಪಪ್ಪಾಯ–1000, ಮಾವು–1000, ತರಕಾರಿ ಸಸಿ–50000ಸಂ.
7	ಕಛೇರಿ ಸಸ್ಯಾಗಾರ	ಬೆಳ್ತಂಗಡಿ	1.39	1.39	0.00	ಅಡಿಕೆ–5000, ಕಾಳುಮೆಣಸು– 10000 ಪಾಲಿಬ್ಯಾಗ್, ತರಕಾರಿ ಸಸಿ–5000ಸಂ.
8	ಚಾರ್ಮಾಡಿ ತೋಟಗಾರಿಕೆ ಕ್ಷೇತ್ರ	ಬೆಳ್ತಂಗಡಿ	300.00	0.00	300.00	–
9	ಚಾರ್ಮಾಡಿ ಹಳೆ ಐ ಬಿ ಬಂಗ್ಲೆ ಸಸ್ಯಾಗಾರ	ಬೆಳ್ತಂಗಡಿ	1.15	1.15	0.00	ಕಾಳುಮೆಣಸು– 5000 ಪಾಲಿಬ್ಯಾಗ್.
10	ಕದ್ರಿ ಉದ್ಯಾನವನ	ಮಂಗಳೂರು	15.88	15.88	0.00	–
ಜಿಲ್ಲಾವಲಯ						
1	ಕಛೇರಿ ಸಸ್ಯಾಗಾರ	ಬಂಟ್ವಾಳ	0.22	0.22	0.00	–
2	ತುಂಬೆ ತೋಟಗಾರಿಕೆ ಕ್ಷೇತ್ರ	ಬಂಟ್ವಾಳ	26.61	24.61	2.00	ಅಡಿಕೆ–10000, ಕಾಳುಮೆಣಸು– 15000 ಪಾಲಿಬ್ಯಾಗ್, ಕೊಕ್ಕೊ2000, ಗೇರು–5000, ಮಲ್ಲಿಗೆ–2000 ತರಕಾರಿ ಸಸಿ–5000ಸಂ.
3	ವಿಟ್ಲ ತೋಟಗಾರಿಕೆ ಕ್ಷೇತ್ರ	ಬಂಟ್ವಾಳ	9.01	9.01	0.00	ಅಡಿಕೆ–3000, ಕಾಳುಮೆಣಸು– 15000 ಪಾಲಿಬ್ಯಾಗ್, ನುಗ್ಗೆ–1000.
4	ಮೂಡಬಿದ್ರೆ ಸಸ್ಯಾಗಾರ	ಮಂಗಳೂರು	7.12	0.00	7.12	–

ಜಿಲ್ಲೆಯಲ್ಲಿ 2020–21ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ವಿವಿಧ ಯೋಜನೆಗಳ ಪ್ರಗತಿಯ ನೋಟ ಹಾಗೂ ವಿವಿಧ ಯೋಜನೆಗಳಿಂದ ಪ್ರಯೋಜನೆ ಪಡೆದ ಫಲಾನುಭವಿಗಳ ವಿವರ:–

ಜಿಲ್ಲಾವಲಯ ಯೋಜನೆಗಳು:

ಕ್ರ.ಸಂ.	ಯೋಜನೆಯ ಹೆಸರು	ವಾರ್ಷಿಕ ಗುರಿ		ಸಾಧನೆ		ಬಿಡುಗಡೆ ಅನುದಾನ	ಫಲಾನುಭವಿಗಳ ಸಂಖ್ಯೆ	ಷರಾ
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ			
1	**ಡಿ–01 ತೋಟಗಾರಿಕೆ ಬೆಳೆಗಳ ವಿಶೇಷ ಹನಿ ನೀರಾವರಿ ಸಹಾಯಧನ (2435–00–101–0–28)**							
	ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ ಸಹಾಯಧನ (ಹೆಕ್ಟೇರ್‌ಗಳಲ್ಲಿ)	5.50	11	5.48546	16.15	5.50	26	ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಕೆಯಲ್ಲಿ ಕೃಷಿಕರಿಗೆ 2ಹೆ.ವರೆಗೆ ಶೇ.90 ರಂತೆ ಹಾಗೂ 2ರಿಂದ5ರವರೆಗೆ ಶೇ.45ರ ಸಹಾಯಧನ ಒದಗಿಸಲಾಗಿರುತ್ತದೆ.
2	**ಡಿ–02 ತೋಟಗಾರಿಕೆ ಕಟ್ಟಡಗಳ ನಿರ್ವಹಣೆ (2435–00–101–0–32)**							
	1) ತೋಟಗಾರಿಕೆ ಉಪನಿರ್ದೇಶಕರ ಕಛೇರಿ ಹಳೆ ಕಟ್ಟಡಕ್ಕೆ ಆರ್.ಸಿ.ಸಿ. ಮೇಲ್ಛಾವಣಿ ಅಳವಡಿಕೆ ಹಾಗೂ ನೆಲಹಾಸು ಹಾಸುವುದು ಹಾಗೂ ಮೇಲ್ದರ್ಜೆಗೇರಿಸುವಿಕೆ (ಮುಂದುವರಿದ ಕಾಮಗಾರಿ–ಒಳಾಂಗಣ ಅಭಿವೃದ್ಧಿ)	10.00	1	10.00	1	22.84	–	ಇಲಾಖಾ ಕಟ್ಟಡದ ದುರಸ್ಥಿ ಕಾರ್ಯ ಕೈಗೊಂಡು ಅಭಿವೃದ್ಧಿ ಪಡಿಸಿದೆ.
	2) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಪುತ್ತೂರು ರವರ ಕಛೇರಿ ಕಟ್ಟಡ ಮೇಲ್ದರ್ಜೆಗೇರಿಸುವಿಕೆ (ಮುಂದುವರಿದ ಕಾಮಗಾರಿ–ಹೆಚ್ಚುವರಿ)	5.84	1	5.84	1			
	3) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬೆಳ್ತಂಗಡಿ ರವರ ಹೊಸ ಕಟ್ಟಡ ಸುಸಜ್ಜಿತಗೊಳಿಸಲು ರಾಜ್ಯವಲಯ ಯೋಜನೆಗೆ ಪೂರಕ ಅನುದಾನ (ಮುಂದುವರಿದ ಕಾಮಗಾರಿ–ಒಳಾಂಗಣ ಅಭಿವೃದ್ಧಿ)	7.00	1	7.00	1			
	ಒಟ್ಟು	**22.84**	**3**	**22.84**	**3**	**22.84**		
3	**ಡಿ–03 ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ (2435–00–101–0–35)**							
	ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ	5.00	37.27	5.00	37.27	5.00	–	ಈ ಕಾರ್ಯಕ್ರಮದಡಿ ಇಲಾಖಾ ತೋಟಗಾರಿಕಾ ಕ್ಷೇತ್ರ ಮತ್ತು ನರ್ಸರಿಗಳ ನಿರ್ವಹಣೆಯನ್ನು ಮಾಡಲಾಗಿದೆ.
4	**ಡಿ–04 ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ (2435–00–101–0–36)**							
	1)ತೆಂಗು ಬೀಜ ಸಂಗ್ರಹಣೆ (ಸಂ) 2020–21	4.24	17656	4.77984	17553	6.50		ಉತ್ತಮ ಗುಣಮಟ್ಟದ ಸಸಿಗಳನ್ನು ಪೂರೈಸುವ ನಿಟ್ಟಿನಲ್ಲಿ ನರ್ಸರಿಯಲ್ಲಿನ ಸಸಿಗಳ ನಿರ್ವಹಣೆ ಮಾಡಿದ್ದು, ಬಿತ್ತನೆ ಕಾಯಿಗಳನ್ನು ಸಂಗ್ರಹಿಸಿ ನಾಟಿ ಮಾಡಲಾಗಿದೆ.
	2)2019–20ನೇ ಸಾಲಿನ ತೆಂಗಿನ ಸಸಿಗಳ ಪಾಲನೆ (ಸಂ)	0.93	18051	0.66815	18051			
	3)2018–19ನೇ ಸಾಲಿನ ತೆಂಗಿನ ಸಸಿಗಳ ಪಾಲನೆ (ಸಂ)	0.29	22340	0.16876	22340			
	4)ಸಂಗ್ರಹಿಸಿದ ತೆಂಗಿನ ಕಾಯಿ (ಬೀಜದ ಕಾಯಿ) ಗಳ ಬಿತ್ತನೆ	1.04	0	0.88281	0			
	ಒಟ್ಟು	**6.50**	**58047**	**6.49956**	**57944**	**6.50**	–	
5	**ಡಿ–05 ಪ್ರಚಾರ ಮತ್ತು ಸಾಹಿತ್ಯ (2435–00–101–0–38)**							

	1)ಕರಪತ್ರಗಳು/ಬತ್ತಿ ಚಿತ್ರಗಳು/ಕಿರುಹೊತ್ತಿಗೆ/ಕೈಪಿಡಿ/ಬ್ರೋಚರ್ಸ್/ ಬ್ಲೋಅಪ್ಸ್/ಚಾರ್ಟ್ ಮತ್ತು ಇತರೆ ಪ್ರಚಾರ ಸಾಮಾಗ್ರಿಗಳ ಮುದ್ರಣ (ಸಂ)	5.00	50000	6.88913	50000	10.50	–	ತೋಟಗಾರಿಕೆ ಬೆಳೆಗಳ ಹಾಗೂ ಯೋಜನೆಗಳ ಕುರಿತು ಕರಪತ್ರ, ತರಬೇತಿ ಕಾರ್ಯಕ್ರಮ ಹಾಗೂ ತೋಟಗಾರಿಕೆ ದಿನಾಚರಣೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.
	2)ತೋಟಗಾರಿಕೆ ದಿನಾಚರಣೆ/ಪ್ರದರ್ಶನಗಳು (ಸಂ)	3.30	14	1.40506	14			
	3) ಕಂಪ್ಯೂಟರ್ ನಿರ್ವಹಣೆ (ಸಂ)	2.20	5	2.20505	5			
	ಒಟ್ಟು	**10.50**	**50019**	**10.49924**	**50019**	**10.50**		
6	**ಡಿ–07 ಜೇನು ಸಾಕಾಣಿಕೆ (2851–00–107–0–33)**							
	1)ಹೊಸದಾಗಿ ಜೇನುಕೃಷಿ ಕೈಗೊಳ್ಳ ಬಯಸುವ ಕೃಷಿಕರಿಗೆ 2 ದಿವಸಗಳ ಸಾಕಾಣಿಕೆ ತರಬೇತಿ ಹಾಗೂ ಅಧ್ಯಯನ ಪ್ರವಾಸ	4.90	612	4.86885	1012	4.90	1375	ರೈತರಿಗೆ ಜೇನು ಸಾಕಾಣಿಕೆಗೆ ತರಬೇತಿ ನೀಡಿದೆ ಹಾಗೂ ರೈತರಿಗೆ ಜೇನು ಪೆಟ್ಟಿಗೆ ಹಾಗೂ ಕಾಲನಿ ಖರೀದಿಸಿರುವುದಕ್ಕೆ ಸಹಾಯಧನ ನೀಡಿ ಜೇನು ಸಾಕಾಣಿಕೆಯನ್ನು ಪ್ರೋತ್ಸಾಹಿಸಲಾಗಿದೆ.
	2)ಜೇನು ಪೆಟ್ಟಿಗೆ ಹಾಗೂ ಜೇನು ಕುಟುಂಬಗಳಿಗೆ ಖರೀದಿಸಿರುವುದಕ್ಕೆ ಬ್ಯಾಕ್‌ಎಂಡೆಂಡ್ ಸಹಾಯಧನ	28.10	792	28.12485	816	28.10		
	3)ಕಛೇರಿ ವೆಚ್ಚ	2.00	0	1.99940	0	2.00		
	ಒಟ್ಟು	**35.00**	**1404**	**34.9931**	**1828**	**35.00**	**1375**	
7	**ಡಿ–8 ರೈತರಿಗೆ ತರಬೇತಿ (2435–00–101–0–64)**							
	ರೈತರಿಗೆ ತರಬೇತಿ	3.00	750	2.99829	1025	3.00	1025	ತೋಟಗಾರಿಕೆ ಬೆಳೆಗಳ ಬೇಸಾಯ ಕುರಿತು ರೈತರಿಗೆ ತರಬೇತಿ ನೀಡಲಾಗಿದೆ.

ರಾಜ್ಯವಲಯ ಯೋಜನೆ:

ಕ್ರಸ	ಯೋಜನೆಯ ಹೆಸರು	ವಾರ್ಷಿಕ ಗುರಿ		ಸಾಧನೆ		ಬಿಡುಗಡೆ ಅನುದಾನ	ಫಲಾನುಭವಿಗಳ ಸಂಖ್ಯೆ	ಷರಾ
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ			
1	**ಎಸ್ –01 ನಿರ್ದೇಶನ ಮತ್ತು ಆಡಳಿತ (2401–00–001–2–01)**							
	ಸಿಬ್ಬಂದಿ ವೇತನ ಮತ್ತು ಪ್ರಯಾಣ ಭತ್ಯೆ	12.89	5	12.88912	5	12.89	–	ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳ ಬಾಡಿಗೆ ವಾಹನ ವೆಚ್ಚ ಭರಿಸಿದೆ.
2	**ಎಸ್–02 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401–00–001–2–10)**							
	ಪವರ್ ಟಿಲ್ಲರ್ ಖರೀದಿಗೆ ಸಹಾಯಧನ	4.00	4.00	4.00	4.00	4.00	4	ಪವರ್ ಟಿಲ್ಲರ್ ಖರೀದಿಸಿದ ಪ.ಜಾತಿ ಮತ್ತು ಪ.ಪಂಗಡ ಫಲಾನುಭವಿಗಳಿಗೆ ಶೇ.90 ರ ಸಹಾಯಧನ ನೀಡಿದೆ
3	**ಎಸ್–03 ರಾಷ್ಟ್ರೀಯ ಎಣ್ಣೆ ಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ (2401–00–108–2–18)**							
	ಎಣ್ಣೆ ತಾಳೆ ಬೆಳೆ ಪ್ರದೇಶ ವಿಸ್ತರಣೆಗೆ ಸಹಾಯಧನ	17.735	906.00	10.42891	1011.72	11.09	368	
4	**ಎಸ್–04 ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (2401–00–108–2–30)**							
	ಹನಿ ನೀರಾವರಿ ಪ್ರದೇಶ ವಿಸ್ತರಣೆಗೆ ಸಹಾಯಧನ	147.88	281.71	107.60282	283.40	107.71	396	ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಕೆಯಲ್ಲಿ ಕೃಷಿಕರಿಗೆ 2ಹೆ.ವರೆಗೆ ಶೇ.90 ರಂತೆ ಹಾಗೂ 2ರಿಂದ5ರವರೆಗೆ ಶೇ.45ರ ಸಹಾಯಧನ ಒದಗಿಸಲಾಗಿರುತ್ತದೆ.
5	**ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY)**							
	ಖಏಗಿಐ ಯೋಜನೆಯಡಿ ಯಂತ್ರೋಪಕರಣ ಖರೀದಿಗೆ ಸಹಾಯಧನ	77.75	155.50	49.26951	301.00	77.75	410	ತೋಟಗಾರಿಕೆ ಯಂತ್ರೋಪಕರಣ ಖರೀದಿಗೆ ಸಹಾಯಧನ ನೀಡಲಾಗಿದೆ.
